

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 273 Tuesday 19-03-2024 E-mail : maruti.b.hosamani76@gmail.com Page: 4 Price : Rs. 1/-


## ಹೊಸಪೇಟೆ ಎ.ಪಿ.ಎಂ.ಸಿ ಪ್ರಾಂಗಣದಲ್ಲಿ ರಾಗಿ, ಜೋಳ ಖರೀದಿ ಪ್ರಕ್ರಿಯೆ ಆರಂಭ: ಜಿಲ್ಲಾಧಿಕಾರಿ ಪರೀಶೀಲನೆ



**ಹೊಸಪೇಟೆ :** ಹೊಸಪೇಟೆ ಎಪಿಎಂಸಿ ಪ್ರಾಂಗಣದಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಮುಂಗಾರು ಹಂಗಾಮಿನ ರಾಗಿ ಮತ್ತು ಜೋಳದ ಖರೀದಿ ಪ್ರಕ್ರಿಯೆ ಮಾರ್ಚ 18 ರಂದು ಪ್ರಾರಂಭವಾಯಿತು.

ಜಿಲ್ಲಾಧಿಕಾರಿಗ ಳಾದ ಎಂ.ಎಸ್.ದಿವಾಕರ ಅವರು ಮಾರ್ಚ 18 ರಂದು ಎಪಿಎಂಸಿ ಪ್ರಾಂಗಣಕ್ಕೆ ಭೇಟಿ ನೀಡಿ, ಸರ್ಕಾರದ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಮೂಲಕ ರೈತರಿಂದ ರಾಗಿ ಮತ್ತು ಜೋಳ ಖರೀದಿಸುವ ಪ್ರಕ್ರಿಯೆ ಬಗ್ಗೆ ಮಾಹಿತಿ ಪಡೆದರು.

ಪ್ರಸ್ತುತ ಈ ಖರೀದಿ ಕೇಂದ್ರದಲ್ಲಿ 59 ರೈತರು 1132.50 ಕ್ವಿಂಟಾಲ್ ರಾಗಿಯನ್ನು, 23 ರೈತರು 910 ಕ್ವಿಂಟಾಲ್ ಬಿಳಿ ಜೋಳವನ್ನು ನೋಂದಾಯಿಸಿದ್ದಾರೆ. ಸರ್ಕಾರವು ಈ ಬಾರಿ ಎಫ್.ಎ.ಕ್ಯೂ. ಗುಣಮಟ್ಟದ ಪ್ರತಿ ಕ್ವಿಂಟಾಲ್ ರಾಗಿಗೆ 3,846 ರೂ. ಮತ್ತು ಎಫ್.ಎ.ಕ್ಯೂ. ಗುಣಮಟ್ಟದ ಜೋಳಕ್ಕೆ 3180 ರೂ.ಗಳನ್ನು ಘೋಷಿಸಿರುತ್ತದೆ ಎಂದು ಅಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದರು.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 2022-23 ನೇ ಸಾಲಿನಲ್ಲಿ ಹೊಸಪೇಟೆ ಖರೀದಿ ಕೇಂದ್ರವು ಆರಂಭವಾಗಿದೆ. 2022-23 ನೇ ಸಾಲಿನ ಮುಂಗಾರು ಋತುವಿನಲ್ಲಿ ಬೆಳೆದ ಭತ್ತ, ರಾಗಿ ಮತ್ತು ಜೋಳ ಉತ್ಪನ್ನಗಳನ್ನು ಖರೀದಿಸಲು ವಿಜಯನಗರ ಜಿಲ್ಲೆಗೆ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ಖರೀದಿ ಎಜೆನ್ಸಿ ಯಾಗಿರುತ್ತದೆ. ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ವಿಜಯನಗರ ಜಿಲ್ಲೆಯ ಹೊಸಪೇಟೆ ಎಪಿಎಂಸಿ ಪ್ರಾಂಗಣದಲ್ಲಿ ಡಿಸೆಂಬರ್ 1 ರಿಂದ ನೋಂದಣಿ ಕೇಂದ್ರವನ್ನು ತೆರೆದಿರುತ್ತದೆ ಎಂದು ಅಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದರು. ಖರೀದಿ ಮಾಡಿದ ಉತ್ಪನ್ನವನ್ನು ಸರ್ಕಾರವು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿತರಿಸುವ ಉದ್ದೇಶ ವಿರುವುದರಿಂದ ರಾಗಿ ಮತ್ತು ಜೋಳವನ್ನು ಬೆಳೆದ ರೈತರು ತಾವು ಬೆಳೆದ ಉತ್ಪನ್ನವನ್ನು ಚೆನ್ನಾಗಿ ಒಣಗಿಸಿ, ಯಾವುದೇ ಕಸ, ಕಡ್ಡಿ, ಧೂಳು, ಮಣ್ಣಿರದಂತೆ ಸ್ವಚ್ಚಗೊಳಿಸಿ ಖರೀದಿ ಕೇಂದ್ರಗಳಿಗೆ ತರಲು ರೈತರಲ್ಲಿ ಮನವಿ ಮಾಡಿರುವುದಾಗಿ ಅಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಆಹಾರ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಿಕಾರ್ಜುನ, ಕೃಷಿ ಮಾರಾಟ ಮಂಡಳಿಯ ಸಿದ್ದು ಸ್ವಾಮಿ, ಖರೀದಿ ಏಜೆನ್ಸಿದಾರರು, ಜಿಲ್ಲಾ ವ್ಯವಸ್ಥಾಪಕರು ಈ ಸಂದರ್ಭದಲ್ಲಿ ಇದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮಾಲತೇಶ್.ಶೆಟ್ಟರ್.ಹೊಸಪೇಟೆ**

## ಸುಪ್ರೀಂಕೋರ್ಟಿನ ಆದೇಶಗಳನ್ನು ಪೋಲಿಸ್ ಸಿಬ್ಬಂದಿ ಅಪ್ಡೇಟ್ ಮಾಡಿಕೊಳ್ಳ ಬೇಕು: ಜಿಲ್ಲಾ ಎಸ್.ಪಿ. ಹರಿಬಾಬು



**ಹೊಸಪೇಟೆ :** ಸುಪ್ರೀಂಕೋರ್ಟಿನ ಮತ್ತು ಹೈಕೋರ್ಟಿನ ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳನ್ನ ಪ್ರತಿಯೊಬ್ಬ ಪೊಲೀಸ್ ಅಪ್ಡೇಟ್ ಪಡೆದು ಕೊಳ್ಳಬೇಕು ಎಂದು ಜಿಲ್ಲಾ ಎಸ್ಪಿ ಡಾ.ಶ್ರೀಹರಿಬಾಬು ಹೇಳಿದರು. ಅವರು ಹೊಸಪೇಟೆ ನಗರದಲ್ಲಿ ಶನಿವಾರ ಜಿಲ್ಲಾ ಎಸ್ಪಿ ಕಚೇರಿ ಸಭಾಂಗಣದಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾಡಳಿತ,ಜಿ.ಪಂ,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಚೈತನ್ಯ ಗ್ರಾಮೀಣಾಭಿವೃದ್ಧಿ ಎಜ್ಯುಕೇಷನಲ್ ಟ್ರಸ್ಟ್ ಸಹಯೋಗದಲ್ಲಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ ಕಾಯ್ದೆ-2015 ತಿದ್ದುಪಡಿ 2021 ಹಾಗೂ Adoption Regulations-2022 ರ) ವಿಷಯಗಳಿಗೆ ಜಿಲ್ಲಾ ಪೊಲೀಸ್ ಸಿಬ್ಬಂದಿಗಳಿಗೆ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ಮಕ್ಕಳ ಹಕ್ಕುಗಳ ರಕ್ಷಣೆಗೆ ಎಲ್ಲಾ ಇಲಾಖೆಗಳು ಒಂದಾಗಿ ಕೆಲಸ ಮಾಡಬೇಕಿದೆ ನಮಗೆ ಗೊತ್ತಿಲ್ಲದೇ ಸಮಾಜದಲ್ಲಿ ಬಾಲ್ಯ ವಿವಾಹಗಳು ಮತ್ತು ಮಹಿಳೆಯರ ಮೇಲೆ ದೌರ್ಜನ್ಯಗಳು ನಡೆಯುತ್ತವೆ ಅವುಗಳನ್ನ ತಡೆಯುವ ನಿಟ್ಟಿನಲ್ಲಿ ಪ್ರತಿಯೊಬ್ಬರು ತಮ್ಮ ಕರ್ತವ್ಯ ಎಂದು ಕೆಲಸ ಮಾಡಬೇಕಿದೆ.

ಮಕ್ಕಳ ಮೇಲೆ ದೌರ್ಜನ್ಯ, ಭಿಕ್ಷಾಟನೆ, ಬಾಲ ಕಾರ್ಮಿಕ ಪದ್ಧತಿ ಸೇರಿದಂತೆ ಹಲವು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ತಡೆಯಬೇಕಿದೆ. ಪ್ರತಿಯೊಬ್ಬ ಪೋಷಕರು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡುವ ಕಾರ್ಯ ಆಗಬೇಕು. ಇದು ಗ್ರಾಮೀಣ ಮಟ್ಟದಿಂದ ನಗರ ಪ್ರದೇಶಗಳಲ್ಲೂ ಮಕ್ಕಳಿಗೆ ಶಿಕ್ಷಣ ಕೊಡಿಸುವ ಕೆಲಸವಾಗಬೇಕು ಎಂದರು.

ಬೆಂಗಳೂರಿನ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯ ಸಂಪನ್ಮೂಲ ವ್ಯಕ್ತಿ ತರಬೇತಿದಾರ ರೋಹಿತ್ ಸಿಜೆ ಮಾತನಾಡಿ, ಬಾಲ್ಯ ವಿವಾಹ ತಡೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಬೇಕು. ಈ ಕಾಯ್ದೆಯ ಕುರಿತು ಜಾಗೃತಿ ಮೂಡಿಸಬೇಕು. ಪೋ-ಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಕಾನೂನು ರೀತ್ಯ ಕ್ರಮವಹಿಸ ಬೇಕು. ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಯಲು ಪೋಕ್ಸೋ ಕಾಯ್ದೆ-2012 ಅನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಬೇಕು. ಜೊತೆಗೆ ಈ ಕಾಯ್ದೆ ಅಂಶಗಳನ್ನು ಪ್ರಚಾರ ಪಡಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಎಸ್ ಶ್ವೇತಾ ಮಾತನಾಡಿದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಸುಧೀಪ್ ಕುಮಾರ್ ಉಂಕಿ ಪ್ರಸ್ತಾವಿಕ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಹೊಸಪೇಟೆ ಉಪ ವಿಭಾಗದ ಡಿವೈಎಸ್ಪಿ ಶರಣ ಬಸವೇಶ್ವರ ಭಾಗಿಯಾಗಿದ್ದರು.

ಈ ಸಂದರ್ಭದಲ್ಲಿ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯುಕೇಷನಲ್ ಟ್ರಸ್ಟ್ ಅಧ್ಯಕ್ಷ ಭೀಮರಾಜ ಯು, ಮಕ್ಕಳ ರಕ್ಷಣಾ ಘಟಕದ ಗಂಗಾಧರ್ ಡಿ, ಶರಣಪ್ಪ, ಶ್ರೀಕಾಂತ, ನಿಂಗರಾಜ ಸಖಿ ಘಟಕದ ಸಿಬ್ಬಂದಿಗಳು ಪೊಲೀಸ್ ಸಿಬ್ಬಂದಿಗಳು ಭಾಗಿಯಾಗಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮಾಲತೇಶ್.ಶೆಟ್ಟರ್. ಹೊಸಪೇಟೆ**

## ಜಿಲ್ಲಾ ಕನ್ನಡ ಸಮ್ಮೇಳನದ ಸರ್ವಾಧಿಕಾರಾದ ಡಾ. ವ್ಹಿ.ಡಿ.ಐಹೊಳ್ಳಿ ಅವರಿಗೆ ಸನ್ಮಾನ

**ವಿಜಯಪುರ :** ನಮ್ಮ ಜಿಲ್ಲೆಯ ಹೆಸರಾಂತ ಸಾಹಿತಿಗಳಾದ ಡಾ.ವ್ಹಿಡಿಐಹೊಳ್ಳಿಅವರುನಾಡಿನಸಾಹಿತ್ಯಲೋಕಕ್ಕೆತಮ್ಮದೇ ಆದ ಕೊಡುಗೆ ನೀಡುವ ಮೂಲಕ ನಮ್ಮ ನಾಡು, ಭಾಷೆಯ ಕೀರ್ತಿಯನ್ನು ಎಲ್ಲೆಡೆ ಪಸರಿಸುವಂತೆ ಮಾಡಿದ್ದಾರೆ. ನಮ್ಮ ಭಾಷೆಯ ಶ್ರೀಮಂತಿಕೆ ಹೆಚ್ಚಲು ಅವರ ಸಾಹಿತ್ಯಿಕ ಕೊಡುಗೆ ಅಪಾರವಾಗಿದೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಯುವ ಘಟಕದ ಅಧ್ಯಕ್ಷ ಅಮರೇಶ ಸಾಲಕ್ಕಿ ಹೇಳಿದರು.

ಅವರು ಡಾ.ವ್ಹಿ ಡಿ ಐಹೊಳ್ಳಿ ಅವರ ಮನೆಯಲ್ಲಿ ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಯುವ ಘಟಕದ ಗೌರವ ಸಲಹೆಗಾರ ಸಂತೋಷ ಬಂಡೆ ಮಾತನಾಡಿ, ಅನೇಕ ಕೃತಿಗಳನ್ನು ಸಂಪಾದಿಸಿ,ರಚಿಸಿದ ಅನುಭವ ಡಾ.ಐಹೊಳ್ಳಿ ಅವರದು. ಶರಣ ಸಾಹಿತ್ಯ, ಕಥೆ, ಕಾವ್ಯಗಳನ್ನುಕೂಡರಚಿಸಿದಅವರುಪ್ರಸ್ತುತವಚನಪಿತಾಮಹ ಡಾ. ಫ.ಗು ಹಳಕಟ್ಟಿ ಸಂಶೋಧನಾ ಕೇಂದ್ರದ ಸಹ ಸಂಯೋಜಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಛಲವಾದಿ ಸಮಾಜದಿಂದ ತೋಟಗಾರಿಕೆ ವಿ.ವಿ. ಕುಲಪತಿಗಳಿಗೆ ಸನ್ಮಾನ



**ಬಾಗಲಕೋಟೆ :** ಇಲ್ಲಿನ ಛಲವಾದಿ ಸಮಾಜದ ಮುಖಂಡರು ತೋಟಗಾರಿ-ಕೆ ವಿಶ್ವ ವಿದ್ಯಾಲ0ಯದ ಕುಲಪತಿ0ಯಾಗಿ ಇತ್ತೀಚಿಗೆ ಅಧಿಕಾರ ಸ್ವೀಕರಿಸಿದ ಡಾ.ವಿಷ್ಣುವರ್ಧನ ಅವರನ್ನು ಸನ್ಮಾನಿಸಿ ಸ್ವಾಗತ ಕೋರಿದರು. ಬುದ್ಧನ ಪ್ರತಿಮೆ ನೀಡಿ ಶಾಲು ಹೊದಿಸಿ ಸಿಹಿ0ಯನ್ನು ಹಂಚಿ ಸಂಭ್ರಮಿಸಿದ ಮುಖಂಡರು ಡಾ.ವಿಷ್ಣುವರ್ಧನ ಅವರಿಗೆ ಸಮಾಜದ ಜನರಿಗೆ ತೋಟಗಾರಿ-ಕೆ ವಿಶ್ವವಿದ್ಯಾಲ0ಯದಿಂದ ದೊರೆ0ಯಬೇಕಾದ ಸವಲತ್ತುಗಳ ಬಗ್ಗೆ ವಿವರಿಸಿ ಸಹಕಾರ ಕೋರಿದರು.

ಸನ್ಮಾನ ಸ್ವೀಕರಿಸಿದ ಡಾ.ವಿಷ್ಣುವರ್ಧನ ಅವರು ಮಾತನಾಡಿ ಅಗತ್ಯವಾಗಿ ಸಹಕಾರ ಕೊಡುವದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ಸದಾಶಿವ ಕೊಡಬಾಗಿ,ಪ್ರೇಮನಾಥ ಗರಸಂಗಿ,ತಿಪ್ಪಣ್ಣ ನೀಲನಾ0ಯಕ,ಚಂದ್ರಕಾಂತ ಸರಿಕರ ವಕೀಲರು,ಮಹೇಶ ಬೀಳಗಿ,ಮನೋಹರ ಗರಸಂಗಿ,ಪರಶು ನಾರಾ0ಯಣಿ ,ಹರೀಶ ಹೊದ್ಲೂರ,ಜಗದೀಶ ಕಾಂಬಳೆ ಮೊದಲಾದವರು ಉಪಸ್ಥಿತರಿದ್ದರು.

## 700 ದಿನ ಪೂರೈಸಿದ ಮಹಾಲಿಂಗಪುರ ತಾಲೂಕು ಹೋರಾಟ

### ತಾಲೂಕು ಘೋಷಿಸದಿದ್ದರೆ ಲೋಕಸಭೆ ಚುನಾವಣೆಯ ಬಹಿಷ್ಕಾರದ ಎಚ್ಚರಿಕೆ



**ಮಹಾಲಿಂಗಪುರ :** ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿಸಲು ಆಗ್ರಹಿಸಿ ಪಟ್ಟಣದ ಚನ್ನಮ್ಮ ವೃತ್ತದ ಹತ್ತಿರ ನಡೆಯುತ್ತಿರುವ ಮಹಾಲಿಂಗಪುರ ತಾಲೂಕು ಹೋರಾಟವು ಮಾ.13ರ ಬುಧವಾರ 700 ದಿನಗಳನ್ನು ಪೂರೈಸಿದೆ.

ಹೋರಾಟವು 700 ದಿನ ಪೂರೈಸಿದ ಹಿನ್ನಲೆಯಲ್ಲಿ ಬುಧವಾರ ಹೋರಾಟಗಾರರು ಚನ್ನಮ್ಮ ವೃತ್ತದಲ್ಲಿ ರಸ್ತೆತಡೆಯೊಂದಿಗೆ ಪ್ರತಿಭಟನೆ ನಡೆಸಿದರು.

ತಾಲೂಕು ಹೋರಾಟ ವೇದಿಕೆ ಅಧ್ಯಕ್ಷ ಸಂಗಪ್ಪ ಹಲ್ಲಿ ಮಾತನಾಡಿ ನಮ್ಮ ಹೋರಾಟವು ಪ್ರಾರಂಭವಾದ ನಂತರ ಇಬ್ಬರು ಮುಖ್ಯಮಂತ್ರಿಗಳು, ಎರಡು ಸರ್ಕಾರಗಳು ಬಂದರು, ಮೂರು ದಶಕಗಳ ನಮ್ಮ ಬೇಡಿಕೆ ಮಾತ್ರ ಈಡೇರಿಲ್ಲ. ಎಲ್ಲ ಪಕ್ಷಗಳ ಮುಖಂಡರು, ಜನಪ್ರತಿನಿಧಿಗಳು ಕೇವಲ ಆಶ್ವಾಸನೆ ನೀಡುತ್ತಿದ್ದಾರೆ ಹೊರತು ತಾಲೂಕು ಘೋಷಿಸುತ್ತಿಲ್ಲ. ಲೋಕಸಭೆ ಚುನಾವಣೆಯ ಅಧಿಸೂಚನೆಯ ಒಳಗೆ ತಾಲೂಕು ಕೇಂದ್ರವನ್ನು ಘೋಷಿಸಬೇಕು. ಘೋಷಿಸದಿದ್ದರೆ ಲೋಕಸಭೆ ಚುನಾವಣೆಯನ್ನು ಬಹಿಷ್ಕರಿಸಿ ಉಗ್ರ ಹೋರಾಟ ಮಾಡುವದಾಗಿ ಜಿಲ್ಲಾಡಳಿತ, ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ನೇಕಾರ ಸಂಘದ ರಾಜ್ಯಾಧ್ಯಕ್ಷ ಶಿವಲಿಂಗ ಟಿರ್ಕಿ, ವಿರೇಶ ಆಸಂಗಿ, ಸಿದ್ದು ಶಿರೋಳ ಮಾತನಾಡಿ ಜನಪ್ರತಿನಿಧಿಗಳಿಗೆ ಪಟ್ಟಣದ ಅಭಿಮಾನವಿಲ್ಲದ ಕಾರಣ ಹಾಗೂ ತಾಲೂಕು ಘೋಷಿಸುವ ಇಚ್ಛಾಶಕ್ತಿ ಕೊರತೆಯಿಂದ ವಿಳಂಬವಾಗುತ್ತಿದೆ ಎಂದು ಉಭಯ ಪಕ್ಷಗಳ ಶಾಸಕರು, ಸಚಿವರು, ಮುಖಂಡರ ವಿರುದ್ಧ ಕಿಡಿಕಾರಿಸಿದರು.

ಪರಪ್ಪ ಬ್ಯಾಕೂಡ,ಭೀಮಸಿ ಸಸಾಲಟ್ಟಿ,ಮಹಾಲಿಂಗಪ್ಪ ಅವರಾದಿ, ದುಂಡಪ್ಪ ಇಟ್ನಾಳ, ರಫೀಕ ಮಾಲದಾರ, ರಾಜೇಂದ್ರ ಮಿರ್ಜಿ, ಶ್ರೀಮಂತ ಗೌಂಡಿ, ಬಸಪ್ಪ ಸತ್ತಿಗೇರಿ, ಬಸಪ್ಪ ಯಲ್ಲಟ್ಟಿ, ಭರಮಪ್ಪ ಗಜ್ಯಾಗೋಳ, ಶ್ರೀಶೈಲ ಚಿಮ್ಮಡ, ಮಹಾಲಿಂಗಪ್ಪ ಹಾಸೀಲಕರ ಸೇರಿದಂತೆ ಹಲವರು ತಾಲೂಕು ಹೋರಾಟದಲ್ಲಿ ಭಾಗವಹಿಸಿದ್ದರು.

## ನಂಬಿಕೆ ಇರಲಿ, ಮೂಢನಂಬಿಕೆ ಬೇಡ: ಡಾ. ಲಿಂಗಾನಂದ ಗವಿಮಠ




**ಜಮಖಂಡಿ :** ಇಂದು ವಿಜ್ಞಾನ ತಂತ್ರಜ್ಞಾನ ಹಾಗೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿದ್ದರೂ,ಭಾರತೀಯರು ಈಗಲೂ ಮೌಢ್ಯತೆಗೆ ಮೋಸ ಹೋಗುತ್ತಿರುವುದು ಕಳವಳಕಾರಿಯಾಗಿದೆ. ನಂಬಿಕೆ ಇರಲಿ, ಆದರೆ ಮೂಢ ನಂಬಿಕೆ ಬೇಡ ಎಂದು ಜಮಖಂಡಿಯ ಸರಕಾರಿ ಬಾಲಕರ ಪ.ಭಾ. ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಡಾ. ಲಿಂಗಾನಂದ ಗವಿಮಠ ಹೇಳಿದರು. ನಗರದ ಸರಕಾರಿ ಶಿಕ್ಷಕರ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಅಡಿಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ನಿಮಿತ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪವಾಡ ರಹಸ್ಯ ಬಯಲು ನೀಡಿದರು.

ತೆಂಗಿನ ಕಾಯಿಯಲ್ಲಿ ರಕ್ತ ಮತ್ತು ಹೂ ಬರಿಸುವುದು, ನೆತ್ತಿನ ಮೇಲೆ ಕತ್ತಿ ತೂರುವುದು, ಬೆಂಕಿ ಪೊಟ್ಟಣದ ಸಹಾಯವಿಲ್ಲದೆ,ಯಜ್ಞಕುಂಡ ಹೊತ್ತಿಉರಿಯುವಂತೆ ಮಾಡುವುದು, ನೀರಿನಿಂದ ದೀಪ ಉರಿಸುವುದು. ನಾಲಿಗೆ ಇಲ್ಲದ ಗಂಟೆ ಬಾರಿಸುವುದು. ಹೀಗೆ ಹಲವಾರು ಪವಾಡಗಳ ರಹಸ್ಯಗಳನ್ನು ಅನಾವರಣಗೊಳಿಸಿದ ಅವರು, ಅವುಗಳ ಹಿಂದಿನ ಸತ್ಯವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಆರಂಭದಲ್ಲಿ ಕು. ಗಂಗಶ್ರೀ ಘಂಟಿ, ಪ್ರಾರ್ಥಿಸಿದಳು, ಕು. ಲಕ್ಷ್ಮೀ ಹಳಂಗಳಿ ಸ್ವಾಗತಿಸಿದಳು. ಉಪನ್ಯಾಸಕ ಪ್ರಭುಲಿಂಗಯ್ಯ ಹಿಡಕಲ್ ಪ್ರಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರವಾಚಕರಾದ ವೈ. ಬಿ. ಬಾದವಾಡಗಿ ಮಾತನಾಡುತ್ತ ಭವಿಷತ್ತಿನಲ್ಲಿ ಶಿಕ್ಷಕರಾಗುವ ಇಂತಹ ಪ್ರಶಿಕ್ಷಣಾರ್ಥಿಗಳಿಗೆ ವೈಜ್ಞಾನಿಕ ಮನೋಭಾವನೆಉಂಟುಮಾಡುವಕಾರ್ಯಕ್ರಮಗಳು ಅತೀ ಅವಶ್ಯಕ ಎಂದರು. ಉಪನ್ಯಾಸಕರಾದ ಸಿ.ಎಮ್. ನ್ಯಾಮಗೌಡ, ಆರ್.ಎಸ್. ಪೂಜಾರಿ, ಹೆಚ್. ಎಮ್. ವಸ್ತಾದ, ಎಸ್.ಎಸ್.ಬಿಳ್ಳೂರ ಉಮದಿ, ವಿರೇಶ, ಮಹೇಶ ಜೋಶಿ ಉಪಸ್ಥಿತರಿದ್ದರು. ಕೊನೆಯಲ್ಲಿ ಕು. ಭಾರತಿ ಕೊಣ್ಣೂರ ವಂದಿಸಿದರು. ಕು. ಅಕ್ಷತಾ ಬಸಾಕಾಳಿ ನಿರೂಪಿಸಿದರು.

* ಅನಕ್ಷರತೆ ಅಜ್ಞಾನ ಮತ್ತು ಮಾನಸಿಕವಾಗಿ ಖಿನ್ನತೆಗೊಳಗಾಗಿರುವ ವ್ಯಕ್ತಿಗಳು ಪವಾಡಗಳನ್ನು ನಂಬಿ,ಮೋಸಕ್ಕೆಒಳಗಾಗುತ್ತಿದ್ದಾರೆ.ಡಾ.ಲಿಂಗಾನಂದ ಗವಿಮಠ * ಎಲ್ಲಿಯವರೆಗೆ ಮೋಸ ಹೋಗುವವರು ಇರುತ್ತಾರೋ ಅಲ್ಲಿಯವರೆಗೆ ಮೋಸ ಮಾಡುವವರು ಇರುತ್ತಾರೆ. ಡಾ. ಲಿಂಗಾನಂದ ಗವಿಮಠ

ಜಮಖಂಡಿಯ ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಡಾ. ಲಿಂಗಾನಂದ ಗವಿಮಠ ಪವಾಡರಹಸ್ಯ ಬಯಲು ಕಾರ್ಯಕ್ರಮ ನಡೆಸಿದರು.

## ಮೋದಿ ಮೂರನೇ ಬಾರಿ ಪ್ರಧಾನಿಯಾಗುತ್ತಾರೆ: ಸಚಿವೆ ಶೋಭಾ ಕರಂದ್ಲಾಜೆ

**ವರದಿ:ಲಾಲಸಾಬ ಸವಾರಗೋಳ**

**ವಿಜಯಪುರ:** ನರೇಂದ್ರ ಮೋದಿ ಅವರು ಮೂರನೇ ಬಾರಿ ಮತ್ತೆ ಪಿಎಂ ಆಗಲಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ವಿಶ್ವಾಸ ವ್ಯಕ್ತಪಡಿಸಿದರು.ಬುಧವಾರ ನಗರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು,ಮೋದಿ ಹತ್ತು ವರ್ಷಗಳಲ್ಲಿ ದೇಶದ ಗೌರವ, ಭದ್ರತೆಗಾಗಿ ಕೆಲಸ ಮಾಡಿದ್ದಾರೆ.ಹಿಂದಿನ ಯುಪಿಎ ಸರ್ಕಾರ ಗೋಟಾಲಾ ಸರ್ಕಾರ ಎನ್ನಲಾಗಿತ್ತು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಪ್ರಧಾನಿ ಹೋದರೆ ಎದ್ದುನಿಂತು ಗೌರವ ಕೊಡುತ್ತಿರಲಿಲ್ಲ.ಮೋದಿ ಪ್ರಧಾನಿ ಯಾದ ಮೇಲೆ ಬದಲಾಗಿದೆ.ದೇಶದ ಸೈನ್ಯದ ದಿಕ್ಕು ಬದಲಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶದ ಗೌರವ ಹೆಚ್ಚಿದೆ.

ಯಾವುದೇ ದೇಶಕ್ಕೆ ಹೋದರೂ ಭಾರತಕ್ಕೆ ಗೌರವ ಸಿಗುತ್ತಿದೆ.

ಪ್ರಧಾನಿ ಮೋದಿ ಜಿ 20 ಸಮ್ಮೇಳನ ಯಶಸ್ವಿಯಾಗಿ ಮಾಡಿದ ಕೀರ್ತಿ ಮೋದಿಯವರದ್ದು.

ದೇಶದ ಗೌರವ ಹೆಚ್ಚು ಮಾಡಿದ್ದಾರೆ ಮೋದಿ ಎಲ್ಲೇ ಯಾವುದೇ ದೇಶಕ್ಕೆ ಹೋದರೂ ಗೌರವ ಸಿಗುತ್ತಿದೆ. ಅಭಿವೃದ್ಧಿಯಲ್ಲಿ ದಾಪುಗಾಲು ಇಟ್ಟಿದೆ. ಬಡತನ ರೇಖೆ ಕೆಳಗಿನರನ್ನು ಮೇಲೆಕ್ಕೆತ್ತಲಾಗಿದೆ.

ರೈತರಿಗೆ ಸಹಾಯ ಮಾಡಿದ್ದಾರೆ.

11 ನೇ ಆರ್ಥಿಕ ಸ್ಥಾನದಲ್ಲಿದ್ದ ಭಾರತ 5 ನೇ ಸ್ಥಾನಕ್ಕೆ ಏರಿದೆ 2047 ಕ್ಕೆ ಭಾರತ ವಿಶ್ವಗುರು ಆಗಲಿದೆ ಎಂದರು.

ಶಿಲಾನ್ಯಾಸ ಮಾಡಿದ್ದ ಕಾಮಗಾರಿಗಳನ್ನು ಮೋದಿ ಉದ್ಘಾಟನೆ ಮಾಡುತ್ತಿದ್ದಾರೆ

ಇದು ಮೋದಿ ಸರ್ಕಾರದ ಬದ್ಧತೆ.ಹಿಂದಿನ ಸರ್ಕಾರಗಳು ಇಂಥ ಕೆಲಸ ಮಾಡಿಲ್ಲಾ.ವಿಮಾನ ನಿಲ್ದಾಣ, ರಾಷ್ಟ್ರೀಯ ಹೆದ್ದಾರಿ ಹೆಚ್ಚಳ ಮಾಡಿದ್ದೇವೆ. ರೈಲ್ವೆಗೆ ಹೊಸ ಕಾಯಕಲ್ಪ ನೀಡಲಾಗಿದೆ.

ವಂದೇ ಭಾರತ ರೆಲ್ವೆ ಯೋಜನೆ ಮಾಡಲಾಗಿದೆ.ಎಲ್ಲಾ ರಂಗಗಳಲ್ಲಿ ಭಾರತ ಸಾಧನೆ ಮಾಡಿದೆ. ಮೋದಿಗೆ ಮತ್ತೇ ಅವಕಾಶ ನೀಡಿ ಎಂದು ಮನವಿ ಮಾಡಿದರು.

ರಾಜ್ಯದ 28 ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಬೇಕು. ಜನರು ಮೋದಿಗೆ ಬೆಂಬಲ ನೀಡುತ್ತಿದ್ದಾರೆ.ಜಮ್ಮು ಕಾಶ್ಮೀರದಲ್ಲಿ 370 ಕಲಂ ಬದಲಾವಣೆ ಮಾಡಿದ್ದೇವೆ. ರಾಮ ಮಂದಿರ ನಿರ್ಮಾಣ ಮಾಡಿದ್ದೇವೆ.ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಗೆದ್ದು ಮೋದಿ ಕೈ ಬಲ ಪಡಿಸುತ್ತೇವೆ.ನರೇಂದ್ರ ಮೋದಿ ಹಾಗೂ ಹೈಕಮಾಂಡ್ ಯಾರಿಗೆ ಟಿಕೆಟ್ ಕೊಟ್ಟರೂ ಅವರ ಗೆಲುವಿಗೆ ಕೆಲಸ ಮಾಡುತ್ತೇವೆ ಎಂದು ಹೇಳಿದರು.



ಉಡುಪಿ ಚಿಕ್ಕಮಗಳೂರು ಕ್ಷೇತ್ರದಲ್ಲಿ ಗೋಬ್ಯಾಕ್ ಶೋಭಾ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಅವರು,ಕ್ಷೇತ್ರದಲ್ಲಿ ಸಹಜವಾಗಿ ಗೊಂದಲವಿದೆ.ಯಾರಿಗೆ ಟಿಕೆಟ್ ಕೊಟ್ಟರೂ ಗೆಲ್ಲುವ ಕ್ಷೇತ್ರ.ಹಾಗಾಗಿ ಬೇಡಿಕೆಯಿದೆ.

ಉಡುಪಿ ಚಿಕ್ಕಮಗಳೂರ ಕ್ಷೇತ್ರದಲ್ಲಿನ ಜನರು ನನಗೆ ಎರಡು ಬಾರಿ ಗೆಲ್ಲಿಸಿದ್ದಾರೆ. ಉಡುಪಿ ಚಿಕ್ಕಮಗಳೂರು ಕ್ಷೇತ್ರದಲ್ಲಿ ಹತ್ತಾರು ಅಭಿವೃದ್ಧಿ ಕೆಲಸ ಮಾಡಿದ್ದಾಗಿ ಕೇಂದ್ರ ಸಚಿವೆ ಶೋಭಾ ಹೇಳಿದರು.

ಬೇರೆಯವರು ಟಿಕೆಟ್ ಕೇಳುವುದು ತಪ್ಪಲ್ಲ. ಆದರೆ ಅವಮಾನ ಮಾಡುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೆ ಕೇಂದ್ರದ ನಾಯಕರು ಉತ್ತರ ನೀಡುತ್ತಾರೆಂದು ಹೇಳಿದರು.ಗೋಬ್ಯಾಕ್ ವಿಚಾರವಾಗಿ ಮಾತನಾಡಿದ ಅವರು,ಟಿಕೆಟ್ ಅಪೇಕ್ಷಿತರು

ಹೊರಗಿನವರು ಬಂದವರು ಮಾಡುತ್ತಿದ್ದಾರೆ.ನಾನು ವಿಚಲಿತವಾಗಿಲ್ಲ.ಕಾರ್ಯಕರ್ತರು ಸಹ ವಿಚಲಿತರಾಗಿಲ್ಲ ಎಂದರು.

ಬೆಂಗಳೂರು ಉತ್ತರ ಕ್ಷೇತ್ರದಿಂದ ಸ್ಪರ್ಧೆ ವಿಚಾರ ನನಗೆ ಗೊತ್ತಿಲ್ಲ.

ನಾನು ಫೈಟರ್, ಎಲ್ಲೇ ಟಿಕೆಟ್ ಕೊಟ್ಟರೂ ಹೋರಾಡುವೆ ಗೆಲ್ಲುವೆ ಎಂದು ತಿಳಿಸಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆಲ ಕ್ಷೇತ್ರಗಳಲ್ಲಿ ಪಕ್ಷ ವಿರೋಧಿ ಚಟುಟವಟಿಕೆ ಮಾಡಿರುವ ಆರೋಪ ವಿಚಾರವಾಗಿ ಪ್ರತಿಕ್ರಿಯೆ ನೀಡಿ,ನಾನು ಯಾವುದೇ ದ್ರೋಹ ಮಾಡಿಲ್ಲ. ಹೆತ್ತ ತಾಯಿಗೆ ದ್ರೋಹ ಮಾಡಿಲ್ಲ. ಒಮ್ಮೆ ಪಕ್ಷದ ಟಿಕೆಟ್ ಕೊಟ್ಟರೆ ಮುಗೀತು ಅವರ ಪರವಾಗಿ ಕೆಲಸ ಮಾಡುತ್ತೇವೆ ಎಂದು ಕೇಂದ್ರ ಸಚಿವೆ ಕರಂದ್ಲಾಜೆ ತಿಳಿಸಿದರು.

ಪಕ್ಷ ದ್ರೋಹದಂತಹ ಕೆಲಸ ಅವರು ಮಾಡಿರಬಹುದು ಎಂದು ವಿರೋಧಿಗಳಿಗೆ ಟಾಂಗ್ ನೀಡಿದರು. ತಮ್ಮ ಸೋಲಿನ ಬಗ್ಗೆ ಮತ್ತೊಬ್ಬರ ಬಗ್ಗೆ ಹೇಳುವುದು ಹೆತ್ತ ತಾಯಿಗೆ ಮಾಡಿದ ದ್ರೋಹ ಎಂದು ನುಡಿದರು.

ಬ್ಯಾಡಗಿಮೆಣಸಿನಕಾಯಿಮಾರುಕಟ್ಟೆಗಲಾಟೆವಿಚಾರವಾಗಿ ಪ್ರತಿಕ್ರಿಯೆ ನೀಡಿ, ರಾಜ್ಯ ಸರ್ಕಾರ ರೈತರನ್ನು ಮರೆತಿದೆ. ಕೇಂದ್ರ ಕೊಟ್ಟ 235 ಕೋಟಿ ಹಣ ರೈತರಿಗೆ ನೀಡಿಲ್ಲ ರೈತರು ಸಂಕಷ್ಟದಲ್ಲಿದ್ದಾರೆ.

ಕೇಂದ್ರ ಹಣ ಕೊಡಲು ಸಿದ್ದವಿದೆ.

ಆದರೆ ರಾಜ್ಯ ಸರ್ಕಾರ ಕೆಲಸ ಮಾಡುತ್ತಿಲ್ಲ.ಒಂದು ಲಕ್ಷ ಕೋಟಿ ಹಣ ಇಡಲಾಗಿದೆ.ರಾಜ್ಯಸರ್ಕಾರ ಕೇಂದ್ರಕ್ಕೆ ಯಾವುದೇ ಪ್ರಸ್ತಾವನೆ ನೀಡಿಲ್ಲ.33 ಸಾವಿರ ಕೋಟಿ ಪ್ರೋಸೆಸ್ಸಿಂಗ್ ಗೆ ಕೇಂದ್ರ ಇಟ್ಟಿದೆ.

ಈ ಕುರಿತು ಕೆಲಸ ಮಾಡಲು

ರಾಜ್ಯ ಸರ್ಕಾರಕ್ಕೆ ಆಸಕ್ತಿ ಇಲ್ಲ

ಗ್ಯಾರಂಟಿ ಯೋಜನೆಗಳ ಬೆನ್ನು ಬಿದ್ದಿದ್ದಾರೆ.ಸಿಎಂ, ಡಿಸಿಎಂ ಹಾಗೂ ಸಚಿವರಿಗೆ ಆಸಕ್ತಿಯಿಲ್ಲ ಎಂದು ವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ ಬೆಂಗಳೂರಿಗರಿಗೆ ಕುಡಿಯುವ ನೀರಿಲ್ಲ. ಆದರೂ ಕಾವೇರಿಯಿಂದ ತಮಿಳುನಾಡಿಗೆ ನೀರು ಬಿಡುತ್ತಿದ್ದಾರೆ ಎಂದರು.

ಲೋಕಸಭಾ ಚುನಾವಣೆಗೆ ಯಾರಿಗೆ ಟಿಕೆಟ್ ನೀಡಬೇಕೆಂಬುದನ್ನು ನಮ್ಮ ಹಿರಿಯರು ತೀರ್ಮಾನ ಮಾಡುತ್ತಾರೆ. ಅವರ ತೀರ್ಮಾನಕ್ಕೆ ಬದ್ಧ ಎಂದರು.

## ಶಾಲಾ ಮಕ್ಕಳಿಗೆ ಅನುಕೂಲಕ್ಕಾಗಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಒದಗಿಸಲಾಗುತ್ತಿದೆ: ಸಂಸದ ಕಡಾಡಿ



**ಮೂಡಲಗಿ :** ಗ್ರಾಮೀಣ ಪ್ರದೇಶದಲ್ಲಿನ ಶಾಲಾ ಮಕ್ಕಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹೆಚ್ಚಿನ ಅನುದಾನವನ್ನು ಶಿಕ್ಷಣ ಕ್ಷೇತ್ರಕ್ಕೆ ಒದಗಿಸಲಾಗುತ್ತಿದೆ, ಹೊಸ ತಂತ್ರಜ್ಞಾನವುಳ್ಳ ಶಿಕ್ಷಣ ಜಾರಿಗೊಳಿಸುವುದಕ್ಕಾಗಿ ಸ್ಟೆಮ್ ಲ್ಯಾಬ್, ಅಟಲ್ ಟಿಂಕರಿಂಗ್ ಲ್ಯಾಬ್ ಮತ್ತು ಸ್ಮಾರ್ಟ್‌ಕ್ಲಾಸ್‌ಗಳನ್ನು ಒದಗಿಸಲಾಗುತ್ತಿದೆ ಎಂದು ರಾಜ್ಯ ಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು

ತಾಲೂಕಿನ ಮಸಗುಪ್ಪಿ ಗ್ರಾಮದ ಶ್ರೀ ಮಹಾಲಕ್ಷ್ಮೀ ಪ್ರೌಢ ಶಾಲೆಗೆ ಸನ್ 2022-23ನೇ ಸಾಲಿನ ರಾಜ್ಯಸಭಾ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅನುದಾನದಡಿ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೇರವೇರಿಸಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಇಂದು ಬಹಳಷ್ಟು ವಿದ್ಯಾರ್ಥಿಗಳು ನೌಕರಿಗೋಸ್ಕರ ವಿದ್ಯಾಭ್ಯಾಸ ಮಾಡದೆ ಒಕ್ಕಲುತನದ ಕಡೆಗೂ ಗಮನ ಅರಿಸಬೇಕು ಮತ್ತು ಈಗಿನ ಉದ್ಯೋಗದಲ್ಲಿ ವಿದ್ಯಾರ್ಥಿಗಳು ಯಾವ ರೀತಿ ಮುಂದುವರಿಸುವಂತ ಜ್ಞಾನವನ್ನು ನೀಡಬೇಕಾಗಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಮಕ್ಕಳು ಅವರ ಆಸಕ್ತಿ ಅನುಗುನವಾಗಿ ಶಿಕ್ಷಣ ಪಡೆಯಬಹುದು ಮತ್ತು ಉದ್ಯೋಗವನ್ನು ಕಲಿಯಬಹುದು ಎಂದ ಅವರು ವಿದ್ಯಾರ್ಥಿಗಳ ಆಸಕ್ತಿ ಅನುಗುಣವಾಗಿ ಶಿಕ್ಷಣ ನೀಡಿದರೆ ಮಾತ್ರ ಬಧುಕು ಕಟ್ಟಿಕೊಳ್ಳಲು ಸಾಧ್ಯ, ಹೊಸ ಹೊಸ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಓದುವ ಹವ್ಯಾಸವನ್ನು ಬೆಳೆಸಿದರೆ ಹೊರಗಿ ಜಗತ್ತು ಅರಿಯಲ್ಲು ಸಾಧ್ಯವಾಗುತ್ತದೆ ಎಂದರು.

ಈ ಸಮಯದಲ್ಲಿ ಮಹಾಲಕ್ಷ್ಮೀ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸಾತಪ್ಪ ಕೊಳದುರ್ಗಿ, ಉಪಾಧ್ಯಕ್ಷ ಲಕ್ಷ್ಮಣ ನರಗುಂದ, ಗ್ರಾಮ ಪಂಚಾಯತ ಅಧ್ಯಕ್ಷ ಹಣಮಂತ ಕುಲಕರ್ಣಿ, ಶಿಕ್ಷಣ ಸಂಸ್ಥೆಯ ಸದಸ್ಯರಾದ ರಾಮಣ್ಣ ಗಂಗಣ್ಣವರ, ವಿರುಪಾಕ್ಷ ಕೊಳವಿ, ಬಸಯ್ಯ ಹಿರೇಮಠ, ಬಂದುಸಾಬ ನದಾಫ್, ಭೀಮಪ್ಪ ದೇವರಮನಿ, ಬಾಲಚಂದ್ರ ಹೊಸಕೋಟಿ, ಅಶೋಕ ಮಳಲಿ, ಸುವರ್ಣ ಗೊಂಧಿ, ಭೀಮಪ್ಪ ಅಶಿರೊಟ್ಟಿ, ರೇವಣೆಪ್ಪಾ ತೊಡಕರ, ಚಂದ್ರಪ್ಪ ಮೇತ್ರಿ, ಶಾಲೆಯ ಮುಖ್ಯೋಪಾಧ್ಯಾಯ ಬಸಗೌಡ ಗೌಡರ, ಶಿಕ್ಷಕರು, ಮತ್ತು ಬಿಜೆಪಿ ಕಾರ್ಯಕರ್ತರಾದ ಬಸವರಾಜ ಗಾಡವಿ, ಈಶ್ವರ ಗಾಡವಿ, ಶ್ರೀಕಾಂತ ಅಶಿರೊಟ್ಟಿ, ಸಂಜಯ ಹೊಸಕೋಟಿ, ಬಸವರಾಜ ಬುಜನ್ನವರ, ಪಾಂಡು ಮಳಲಿ, ಶಂಕರ ಮೆಣಸಿ, ನಿಂಗಪ್ಪ ಹೆಜ್ಜೆಗಾರ, ಗುತ್ತಿಗೆದಾರ ಮಹಾಂತೇಶ ಮುಖನ್ನವರ ಮತ್ತಿತರರರುಇದ್ದರು.

ಶಿಕ್ಷಕ ಸಂಗಮೇಶ ಸೊನ್ನದ ನಿರೂಪಿಸಿದರು, ಬಿ.ಎಸ್.ಗೌಡರ ಸ್ವಾಗತಿಸಿದರು, ಈಶ್ವರ ಗಾಡವಿ ವಂದಿಸಿದರು.

# ನೀರನ್ನು ಮಿತವಾಗಿ ಬಳಸಲು ಬಿಟಿಡಿಎ ಸಲಹೆ

**ಬಾಗಲಕೋಟೆ :** ಬೇಸಿಗೆ ಸಮಯದಲ್ಲಿ ನೀರಿನ ಅಭಾವ ಉಂಟಾಗುವ ಸಂಭವವಿದ್ದು, ನೀರನ್ನು ಮಿತವಾಗಿ ಬಳಸುವಂತೆ ಹಾಗೂ ಕುಡಿಯುವ ನೀರನ್ನು ವಿತರಣಾ ನಲ್ಲಿಗಳಿಗೆ ನೇರವಾಗಿ ಮೋಟರ್ ಪಂಪಗಳನ್ನು ಅಳವಡಿಸಿ,

ನೀರನ್ನು ಸೆಳೆಯುತ್ತಿರುವುದು ಹಾಗೂ ನೀರನ್ನು ಉಪಯೋಗಿಸಿದ ನಂತರನಲ್ಲಿ ಬಂದ್ ಮಾಡದೇ ಶುದ್ಧ ಕುಡಿಯುವ ಬದಿ ಚರಂಡಿಗೆ, ಶೌಚಾಲಯಕ್ಕೆ ಬಿಟ್ಟು ಪೋಲಿ ಮಾಡುತ್ತಿರುವುದು, ರಸ್ತೆಗೆ ಸಿಂಪಡಿಸುತ್ತಿರುವುದು ಕಂಡುಬಂದಿರುತ್ತದೆ. ಇದರಿಂದ ನಿವೇಶನದಾರರಿಗೆ ನೀರು ಸಮರ್ಪಕವಾಗಿ ತಲುಪುತ್ತಿಲ್ಲ.

ನೇರವಾಗಿ ಮೋಟರ್ ಪಂಪನ್ನು ವಿತರಣಾ ನಲ್ಲಿಗಳಿಗೆ ಅಳವಡಿಸದಿರಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ನೇರವಾಗಿ ಮೋಟರ್ ಪಂಪನ್ನು ನಲ್ಲಿಗಳಿಗೆ ಅಳವಡಿಸಿರುವುದು ಕಂಡಬಂದಲ್ಲಿ ಮೋಟರ್ ಪಂಪನ್ನು ಜಪ್ತಿ ಮಾಡಿ ನೀರಿನ ಸಂಪರ್ಕ ಬಂದ್ ಮಾಡಲು ಕ್ರಮಕೈಗೊಳ್ಳಲಾಗುವುದೆಂದು ಬಿಟಿಡಿಎ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುಟುಂಬ ಸುಧಾರಿಸಿದರೆ ಸಮಾಜ ಸುಧಾರಣೆ: ಡಾ.ದಡ್ಡಿ

**ಜಮಖಂಡಿ :** ಮಕ್ಕಳು ಆರೋಗ್ಯವಂತ ನಾಗರಿಕರಾಗಿ ಬೆಳೆಯಬೇಕಾದರೆ ಮಕ್ಕಳಿಗೆ ಸಂಸ್ಕಾರ ಮನೆಯಿಂದಲೇ ಆರಂಭವಾಗಬೇಕು. ಕುಟುಂಬ ಸುಧಾರಿಸಿದರೆ ಸಮಾಜ ಸುಧಾರಿಸುತ್ತದೆ ಎಂದು ಹೃದಯರೋಗ ತಜ್ಞ ಡಾ.ಎಚ್.ಜಿ. ದಡ್ಡಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ಆಶ್ರಯದಲ್ಲಿ ಇಲ್ಲಿಗೆ ಸಮೀಪದ ಹುನ್ನೂರ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ದಡ್ಡಿ-ನ್ಯಾಮಗೌಡ ಕುಟುಂಬ ಹಾಗೂ ಪ್ರೊ.ಪಿ.ವಿ. ವಜ್ರಮಟ್ಟಿ 'ಮೇಘಮಿತ್ರ' ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಸವಾಲುಗಳು ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.



ಈ ಹಿಂದೆ ಅವಿಭಕ್ತ ಕುಟುಂಬಗಳು ಇರುತ್ತಿದ್ದವು. ಹಾಗಾಗಿ ಮನೆಯ ಹಿರಿಯರಿಂದ ಮಕ್ಕಳಿಗೆ ಸರಿಯಾದ ಸಂಸ್ಕಾರ ದೊರೆಯುತ್ತಿತ್ತು. ಹಿರಿಯರ ಮಾರ್ಗದರ್ಶನದಲ್ಲಿ ಮಕ್ಕಳು ಒಳ್ಳೆಯ ನಾಗರಿಕರಾಗಿ ರೂಪುಗೊಳ್ಳುತ್ತಿದ್ದರು. ಆದರೆ, ಇಂದು ಮನಷ್ಯ ಬಹಳ ಸ್ವಾರ್ಥಿಯಾಗುತ್ತಿದ್ದಾನೆ. ಜೀವಕ್ಕೆ ಮತ್ತು ಜೀವನಕ್ಕೆ ಬೆಲೆ ಕೊಡುವುದನ್ನು ಮರೆತಿದ್ದಾನೆ ಎಂದು ವಿಷಾದಿಸಿದರು.

ಸಾಹಿತಿ ರುದ್ರಗೌಡ ಪಾಟೀಲ 'ಪ್ರೊ.ಪಿ.ವಿ. ವಜ್ರಮಟ್ಟಿ ಅವರ ಬದುಕು-ಬರಹ' ಕುರಿತು ಮಾತನಾಡಿ, ಪ್ರೊ.ಪಿ.ವಿ.ವಜ್ರಮಟ್ಟಿ ಕನ್ನಡ-ಹಿಂದಿ ದ್ವಿಭಾಷಾ ಸಾಹಿತಿಗಳಾಗಿದ್ದರು. ಸಮಾಜದಲ್ಲಿನ ಮೂಢನಂಬಿಕೆ, ಸಂಪ್ರದಾಯ, ಕಂದಾಚಾರಗಳು ಹಾಗೂ ವರ್ಗ-ವರ್ಣಭೇದಗಳ ವಿರುದ್ಧ ಅವರು ಸದಾ ಹೋರಾಡುತ್ತಿದ್ದರು ಎಂದರು.

ಸಾಹಿತಿ ಪ್ರೊ.ಬಸವರಾಜ ಕಡ್ಡಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ನೀರು-ಭೂಮಿ ಒಂದೆಯಾಗಿದ್ದರೂ ಈಚಲಮರ ಆಶ್ರಯಿಸಿದ ನೀರು ಸಿಂಧಿಯಾಗಿ, ತೆಂಗಿನಮರ ಆಶ್ರಯಿಸಿದ ನೀರು ಎಳನೀರಾಗುವಂತೆ ಒಳ್ಳೆಯ ವಿಚಾರಗಳು ಮನಸ್ಸಿನಲ್ಲಿದ್ದರೆ ಉತ್ತಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂದರು.

ಪ್ರಾಚಾರ್ಯ ಡಾ.ಕೆ.ಡಿ. ಗೊಳಸಂಗಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕನ್ನಡವನ್ನು ಒಪ್ಪಿಕೊಂಡಾಗ ಕನ್ನಡ ನಮ್ಮನ್ನು ಅಪಿಕೊಳ್ಳುತ್ತದೆ. ಕನ್ನಡವೇ ನಮ್ಮತನವಾದಾಗ ಕನ್ನಡ ಭಾಷೆ ಬೆಳೆಯುತ್ತದೆ ಎಂದರು.

ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ ತಳಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಾಹಿತಿ ಡಾ.ಶ್ರೀದೇವಿ ಸುವರ್ಣಖಂಡಿ ಹಾಗೂ ಬರಹಗಾರ ಬಸವರಾಜ ಗಿರಗಾಂವಿ ಅವರಿಗೆ ಮೇಘಮಿತ್ರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಿವೃತ್ತ ಪ್ರಾಚಾರ್ಯ ಡಾ.ಸಂಗಮೇಶ ಮಟೋಳಿ, ಕಸಾಪ ಗೌರವ ಕಾರ್ಯದರ್ಶಿ ವಿನೋದ ಲೋಣಿ, ನಿವೃತ್ತ ಪ್ರಾಚಾರ್ಯ ಸಿ.ಎಸ್. ಝುಳಕಿ, ದತ್ತಿದಾನಿ ಅರುಣ ವಜ್ರಮಟ್ಟಿ ಇದ್ದರು. ಅರವಿಂದ ಕಡಕೋಳ ಪ್ರಾರ್ಥನೆ ಗೀತೆ ಹಾಡಿದರು. ಡಾ.ಎನ್.ವಿ. ಅಸ್ಕಿ ಸ್ವಾಗತಿಸಿದರು.

ಪ್ರಾಚಾರ್ಯ ಡಾ.ಟಿ.ಪಿ. ಗಿರಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎನ್.ಬಿ. ಮಾಲಗಾರ ನಿರೂಪಿಸಿದರು.

# ಹುಟ್ಟು-ಸಾವು ನಡುವೆ ಜೀವನ ಸಾರ್ಥಕ ಮಾಡಿಕೊಳ್ಳಿ: ಲಕ್ಷ್ಮಣ

**ಜಮಖಂಡಿ :** ಹುಟ್ಟು ಆಕಸ್ಮಿಕವಾಗಿದ್ದು ಸಾವು ಖಚಿತ ಇದರ ನಡುವಿನ ಅನುಭವಿಸುವ ಜೀವನವನ್ನು ನಾವು ಸಾರ್ಥಕತೆ ಮಾಡಿಕೊಳ್ಳಬೇಕು. ನಮ್ಮ ಬದುಕು ದೇವರ ಮೆಚ್ಚುಗೆಗೆ ಪಾತ್ರವಾಗಬೇಕು ಎಂದು ಮಾಜಿ ಡಿಸಿಎಂ ಅಥಣಿ ಕ್ಷೇತ್ರದ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ನಗರದ ಬಸವಭವನದಲ್ಲಿ ಆವರಣದಲ್ಲಿ ಅಭಿಮಾನಿ ಬಳಗದವರು ಹಮ್ಮಿಕೊಂಡಿದ್ದ ಕಾಂಗ್ರೆಸ್ ಮುಖಂಡ ತೌಫಿಕ ಪಾರ್ತನಳ್ಳಿ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನುಷ್ಯ ಯಾವ ಸಮಾಜದಲ್ಲಿ ಹುಟ್ಟಿದ್ದಾನೆ ಅನ್ನುವದು ಮುಖ್ಯವಲ್ಲ ಅವರು ಅಳವಡಿಸಿಕೊಂಡಿರುವ ಮಾನವೀಯತೆ ಮುಖ್ಯವಾಗಿದೆ. ಜನರ ಮಧ್ಯದಲ್ಲಿ ಇದ್ದುಕೊಂಡು ಸಮಾಜಮುಖಿ ಸೇವೆಯಲ್ಲಿ ತೌಫಿಕ ಪಾರ್ಥನಳ್ಳಿ ತೊಡಗಿಕೊಂಡಿರುವುದು ಶ್ಲಾಘನೀಯ ಎಂದರು.




ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಮಾತನಾಡಿ, ತೌಫಿಕ ಪಾರ್ಥನಳ್ಳಿ ಯಾವುದೇ ಕೆಲಸ ಸಾಧಿಸುವರೆಗೆ ಬಿಡುವದಿಲ್ಲ. ಎಲ್ಲ ಸಮಾಜದವರ ಜೊತೆ ಒಳ್ಳೆ ಒಡನಾಟ ಇಟ್ಟುಕೊಂಡಿರುವ ಅವರು ಮುಂದಿನ ದಿನಗಳಲ್ಲಿ ಉತ್ತಮ ರಾಜಕಾರಣಿ ಆಗಲಿದ್ದು,

ಅದಕ್ಕೆ ತಮ್ಮ ಆರ್ಶೀವಾದ ಅಗತ್ಯವಾಗಿದೆ ಎಂದರು.

ಕಾಂಗ್ರೆಸ್ ಮುಖಂಡ ಉದ್ಯಮಿ ತೌಫಿಕ ಪಾರ್ಥನಳ್ಳಿ ಮಾತನಾಡಿ, ನಿಮ್ಮ ಅಭಿಮಾನ ನಂಬಿಕೆಗೆ ನಾನು ಸದಾಕಾಲ ಚಿರಋಣಿಯಾಗಿರುತ್ತೇನೆ ಎಂದರು.

ಮುತ್ತಿನಕಂತಿಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರು, ಮುಫ್ತಿ ಲುಕುಮಾನ ಶೇಖ, ಮಾಧುಲಿಂಗ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಅರ್ಬನ್ ಬ್ಯಾಂಕ ಉಪಾಧ್ಯಕ್ಷ ಉಧ್ಯಮಿ ಮಾಮೂನ ಪಾರತನಳ್ಳಿ, ಅರುಣಕುಮಾರ ಶಹಾ, ಅಪ್ಪಾಸಾಬ ಮನಗೂಳಿ, ಕಾಡು ಮಾಳಿ, ಸಂಜು ತೇಲಿ, ಯಮನಪ್ಪ ಗುಣದಾಳ, ಸಲ್ಮಾನ ಪಾರ್ಥನಳ್ಳಿ, ರಾಜು ಗಾಂಧಿ, ಅಲ್ತಾಫ ಸಗರ, ಇಸಾಕ ನಿಪ್ಪಾಣಿ, ಮುದಸರ ನಾಯಕೋಡಿ, ಹಣಮಂತ ತೇಲಿ, ಅಬೂಬಕರ ಕುಡಚಿ, ಸೂರಜ ಕುಡ್ರಾಣಿ, ಪರುಶರಾಮ ಕಾಂಬಳೆ ಸಹಿತ ಹಲವರು ಇದ್ದರು.

ನಗರದ ಬಸವ ಭವನದಲ್ಲಿ ಅಭಿಮಾನಿ ಬಳಗದವರು ತೌಫಿಕ ಪಾರತನಳ್ಳಿ ಹುಟ್ಟುಹಬ್ಬದ ನಿಮಿತ್ತ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಅಭಿಮಾನಿಗಳು ರಕ್ತದಾನ ಮಾಡಿದರು. ನಗರದ ಸರ್ಕಾರಿ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು. ಕ್ಷಯ ರೋಗಿಗಳಿಗೆ ಪೌಷ್ಠಿಕ ಆಹಾರ ಕಿಟ್ ವಿತರಿಸಿದರು. ನಗರಸಭೆ ಕಾರ್ಮಿಕರಿಗೆ ಬಟ್ಟೆ ವಿತರಿಸಿದರು.

ನಗರದ ಅನಾಥಾಶ್ರಮದ ಮಕ್ಕಳಿಗೆ, ವೃದ್ಧಾಶ್ರಮದ ವೃದ್ಧರಿಗೆ ಉಪಹಾರ ವಿತರಿಸಲಾಯಿತು. ನಗರದ ಕಟ್ಟೆಕೆರೆಯಿಂದ ನಡೆದ ಬೈಕ ರ್‍ಯಾಲಿ ಟಿಪ್ಪುಸುಲ್ತಾನ ವೃತ್ತ, ಬಸವೇಶ್ವರ ವೃತ್ತ, ಡಾ.ಬಿ.ಆರ್.ಅಂಬೇಡ್ಕರ ವೃತ್ತದ ಮೂಲಕ ನಗರದ ಪ್ರಮುಖ ರಸ್ತೆಗಳಲ್ಲಿ ಅಭಿಮಾಮನಿ ಬಳಗದವರು ರ್‍ಯಾಲಿ ನಡೆಸಿದರು.

ಕಾಂಗ್ರೆಸ್ ಮುಖಂಡ ತೌಫಿಕ ಪಾರ್ತನಳ್ಳಿ ಅವರನ್ನು ಮಾಜಿ ಡಿಸಿಎಂ ಅಥಣಿ ಶಾಸಕ ಲಕ್ಷ್ಮಣ ಸವದಿ ಸನ್ಮಾನಿಸಿದರು.

## 5ನೇ ತರಗತಿ ಮಕ್ಕಳ ಬೀಳ್ಕೊಡುವ ಸಮಾರಂಭ

# ಮಕ್ಕಳಿಗೆ ವಿದ್ಯೆಯ ಜೊತೆಗೆ ವಿನಯ, ಸಂಸ್ಕಾರ ಕೊಡಬೇಕು

**ಬೀಳಗಿ :** ಮಕ್ಕಳಿಗೆ ವಿದ್ಯೆಯ ಜೊತೆಗೆ ವಿನಯ, ಸಂಸ್ಕಾರ ಕೊಡಬೇಕು. ಆತ್ಮಸ್ಥೈರ್ಯ ತುಂಬಬೇಕು. ಬದುಕಲು ನೂರಾರು ದಾರಿಗಳಿವೆ. ಮಗುವನ್ನು ಮತ್ತೊಬ್ಬರಿಗೆ ಹೋಲಿಸಬೇಡಿ. ಆಸಕ್ತಿ ಅರಿತು ಪ್ರೋತ್ಸಾಹ ನೀಡಬೇಕು ಎಂದು ಕುಂದರಗಿ ಸಿಆರ್‌ಪಿ ಎಂ. ಕೆ. ತೋಟದ ಹೇಳಿದರು.

ತಾಲೂಕಿನ ಕಾತರಕಿ ಗ್ರಾಮದ ಸರಕಾರಿ ಕಿರಿಯ

ಪ್ರಾಥಮಿಕ ಶಾಲೆ (ಜೆಪಿ) ಯ 5ನೇ ತರಗತಿ ಮಕ್ಕಳ ಬೀಳ್ಕೊಡುವ ಸಮಾರಂಭದಲ್ಲಿ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿ,

ನನ್ನಿಂದ ಆಗುತ್ತದೆಯೋ ಇಲ್ಲೋ ಎಂದು ಚಿಂತಿಸದೇ ಪ್ರಯತ್ನ ಮಾಡುವದನ್ನು ಕಲಿಯಬೇಕು ಎಂದು ಹೇಳಿದರು.



ಕಾತರಕಿ ಸಿಆರ್‌ಪಿ ವಿ. ಎನ್. ಸಾಲಾಪೂರ ಮಾತನಾಡಿ, ಶಿಕ್ಷಣವನ್ನು ನೌಕರಿಗಾಗಿ ಪಡೆಯದೇ ಬದುಕಿಗಾಗಿ ಪಡೆಯಬೇಕು. ಮನುಷ್ಯನಿಗೆ ಒಳ್ಳೆಯ ಸಂಸ್ಕಾರವನ್ನು ಬಾಲ್ಯದಲ್ಲಿಯೇ ಕೊಟ್ಟರೆ ಉತ್ತಮ ನಾಗರಿಕರಾಗಬಹುದು. ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾಕ ಕಾರ್ಯದರ್ಶಿ ಎಸ್. ಎಚ್. ಬಾರಾಗಣಿ ಮಾತನಾಡಿ, ಶಿಕ್ಷಕ ವೃತ್ತಿ ಶ್ರೇಷ್ಠ. ಎದಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ ಎಂದೂ ವ್ಯರ್ಥವಾಗದು. ಸೃಜನಶೀಲತೆ, ಮೌಲ್ಯ ಶಿಕ್ಷಣ ಒತ್ತು ಕೊಡಬೇಕು ಎಂದರು.

5ನೇ ವರ್ಗದ ಶಿಕ್ಷಕಿ ಎಸ್. ಎಂ. ಹುಲ್ಯಾಳ ಮಾತನಾಡಿ, ಸಮಯಕ್ಕೆ ಮಹತ್ವ ಕೊಡಬೇಕು. ಹಿಂದೆ ಗುರು, ಮುಂದೆ ಗುರಿ ಇರಬೇಕು. ಸತತ ಪರಿಶ್ರಮದಿಂದ ಓದಿದರೆ ಸಾಧನೆ ಸಾಧ್ಯ ಎಂದು ಹೇಳಿದರು.

ಮುಖ್ಯೋಪಾಧ್ಯಾಯ ಎಂ. ಬಿ. ಪೂಜಾರಿ ಮಾತನಾಡಿ, ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ನಮ್ಮ ಗ್ರಾಮದ ಎಚ್. ಬಿ. ಬೆಳ್ಳುಬ್ಬಿ ಅವರು ನಮ್ಮ ಶಾಲೆಯ ಎಲ್ಲ ಮಕ್ಕಳಿಗೂ ಸ್ಕೂಲ್ ಬ್ಯಾಗ ಕೊಡುಗೆ ನೀಡಿದ್ದಾರೆಂದು ಹೇಳಿದರು.

ಎಸ್‌ಡಿಎಂಸಿ ಹನಮಂತ ವಜ್ಜರಮಟ್ಟಿ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಮುಖ್ಯೋ ಪಾಧ್ಯಾಯರಾದ ಎಸ್. ಕೆ. ಮಡಿಕೇಶ್ವರ, ಎಸ್. ಕೆ. ಕಲ್ಯಾಣಮಠ, ಮಲ್ಲಪ್ಪ ಹುಣಶಿಕಟ್ಟಿ, ಅಜಿತ ಕೋರಡ್ಡಿ, ಉಮೇಶ ತಳ್ಳಿಕೇರಿ, ಎ. ಎಲ್. ಮುದ್ದಾಪೂರ, ಪಿ. ಎಸ್. ಚಟ್ಟಲದೇರಿ, ಎಸ್. ಎಚ್. ಮೋತಿ, ನಿವೃತ್ತ ಎಸ್‌ಬಿಐ ಅಧಿಕಾರಿ ಗಣೇಶ ಕೊಳವಿ ಮತ್ತಿತರಿದ್ದರು.

# ಬರ ನಿರ್ವಹಣೆ: ಕುಡಿಯುವ ನೀರಿನ ಪೂರೈಕೆಯಲ್ಲಿ ಕೊರತೆ ಆಗದಂತೆ ನಿಗಾವಹಿಸಿ

**ಬೆಳಗಾವಿ :** ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ತಾಪ ಮಾನದಿಂದಾಗಿ ಬರಗಾಲದ ಛಾಯೆ ವ್ಯಾಪಿಸಿದ್ದು, ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊರತೆ ಆಗದಂತೆ ನಿಗಾವಹಿಸಲು ಜಿಲ್ಲಾಧಿಕಾರಿ ನಿತೀಶ ಪಾಟೀಲ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ (ಮಾ.11) ರಂದು ಜರುಗಿದ ಬರ ನಿರ್ವಹಣೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಯಾವುದೇ ಕಾರಣಕ್ಕೂ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆ ಆಗದಂತೆ ನಿಗಾವಹಿಸಬೇಕು. ಎಲ್ಲಿ ಅಗತ್ಯವಿದೆಯೋ ಅಂತಹ ಕಡೆಗಳಲ್ಲಿ ತಕ್ಷಣವೇ ನೀರು ಪೂರೈಸಬೇಕು.

ಅಗತ್ಯ ಬಿದ್ದಲ್ಲಿ ಖಾಸಗಿ ಬೊರವೆಲಗಳ ಮೂಲಕ ನೀರು ಪೂರೈಕೆಗೆ ಕ್ರಮ ವಹಿಸಿಲು ತಿಳಿಸಿದರು.

ಟ್ಯಾಂಕರುಗಳ ಮೂಲಕ ನೀರು ಸರಬರಾಜು ಮಾಡುವಲ್ಲಿ ಯಾವುದೇ ದೂರುಗಳಿಗೆ ಆಸ್ಪದ ನೀಡದಂತೆ ಸಮರ್ಪಕ ನೀರು ಪೂರೈಕೆಗೆ ಕ್ರಮ ವಹಿಸಬೇಕು. ಟ್ಯಾಂಕರ ಮೂಲಕ ನೀರು ಸರಬರಾಜು ಮಾಡಿದ್ದರ ಮಾಹಿತಿಯನ್ನು ತಂತ್ರಾಂಶದಲ್ಲಿ ದಾಖಲಿಸಲು ಕ್ರಮ ವಹಿಸಬೇಕು. ತಾಲೂಕುಗಳಲ್ಲಿ ತಹಶಿಲ್ದಾರರ ಪಾತ್ರ ಅತೀ ಪ್ರಮುಖವಾಗಿದ್ದು ಬರ ನಿರ್ವಹಣೆಯಲ್ಲಿ ಅತ್ಯಂತ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುವಂತೆ ತಿಳಿಸಿದರು. ತಮ್ಮ ತಾಲ್ಲೂಕು ವ್ಯಾಪ್ತಿಯ ಗ್ರಾಮಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜತೆ ಸಮನ್ವಯ ಸಭೆ ನಡೆಸುವ ಮೂಲಕ ಕುಡಿಯುವ ನೀರು ಹಾಗೂ ಮೇವಿನ ಕೊರತೆಯ ಬಗ್ಗೆ ಖಚಿತ ಮಾಹಿತಿಯನ್ನು ಪಡೆದುಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಮುಖ್ಯವಾಗಿ ನೀರಿನ ಪೂರೈಕೆ ಯಲ್ಲಿ ವ್ಯತ್ಯವಯವಾಗದಂತೆ ನಿಗಾವಹಿಸಿ ಈ ಕುರಿತು ಯಾವುದೇ ದೂರುಗಳು ಬಾರದಂತೆ ನಿಗಾವಹಿಸುವಂತೆ ಕಟ್ಟುನಿಟ್ಟಿನ ಸೂಚನೇ ನೀಡಿದರು.

ಜಿಲ್ಲೆಯಲ್ಲಿ ಸಧ್ಯ ಮೇವಿನ ಕೊರತೆ ಇರುವುದಿಲ್ಲ ಜಾನುವಾರುಗಳಿಗೆ ಮೇವಿನ ಕೊರತೆ ಆಗದಂತೆ ನಿಗಾವಹಿಸಬೇಕು.

ಮೇವು ಬೇಡಿಕೆ ಇರುವ ಕಡೆಗಳಲ್ಲಿ ಸ್ಥಳೀಯ ಬೇಡಿಕೆಯ ಅನುಸಾರ ಪಶುಪಾಲನಾ ಇಲಾಖೆಯ ಅಧಿಕಾರಿಗಳ ವರದಿ ಆಧರಿಸಿ ಮೇವು ಪೂರೈಕೆ ಮಾಡಬೇಕು ಎಂದು ತಹಶೀಲ್ದಾರರಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಸೇರಿದಂತೆ ವಿವಿಧ ತಾಲೂಕುಗಳ ತಹಶಿಲ್ದಾರರು ಉಪಸ್ಥಿತರಿದ್ದರು.

## ಮುಂಬರುವ ಲೋಕಸಭಾ ಚುನಾವಣೆ-2024 ಹಿನ್ನಲೆ

# ಮಾಧ್ಯಮ ಜೊತೆ ಜಿಲ್ಲಾ ಚುನಾವಣಾಧಿಕಾರಿ ಸಮಾಲೋಚನೆ

**ಬಾಗಲಕೋಟೆ :** ಮುಂಬರುವ ಲೋಕಸಭಾ ಚುನಾವಣೆ-2024ರ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಗಳು ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಜಾನಕಿ ಕೆ.ಎಂ ಅವರ ಅಧ್ಯಕ್ಷತೆಯಲ್ಲಿ ಮಾಧ್ಯಮದವರ ಜೊತೆ ಮಂಗಳವಾರ ಸಮಾಲೋಚನಾ ಸಭೆ ಜರುಗಿತು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜರುಗಿದ ಸಮಾಲೋಚನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಬರುವ ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ಮಾದರಿ ನೀತಿ ಸಂಹಿತೆ ಪಾಲನೆಗೆ ಜಿಲ್ಲೆಯಲ್ಲಿ 136 ಸೆಕ್ಟರ ಅಧಿಕಾರಿಗಳು, 60 ಫ್ಲೈಯಿಂಗ್ ಸ್ಕ್ವಾಡ್, 72 ಸ್ಟ್ಯಾಟಿಕ್ ಸರ್ವೇಲನ್ಸ್ ತಂಡ, 22 ವಿಡಿಯೋ ಸರ್ವೆಲೆನ್ಸ್ ತಂಡ, 7 ವಿಡಿಯೋ ವೀವಿಂಗ್ ತಂಡ ಹಾಗೂ 24 ಚೆಕ್‌ಪೋಸ್ಟಗಳನ್ನು ರಚಿಸಲಾಗಿದೆ. ಚುನಾವಣಾ ಅಭ್ಯರ್ಥಿಗಳು ಒಟ್ಟು 95 ಲಕ್ಷದವರೆಗೆ ಅಧಿಕೃತವಾಗಿ ಖರ್ಚು ಮಾಡಲು ಚುನಾವಣಾ ಆಯೋಗ ಕಲ್ಪಸಿಸಿದೆ ಎಂದರು.

ಅಭ್ಯರ್ಥಿಗಳು ಎಲೆಕ್ಟ್ರಾನಿಕ್ಸ್ ಮಾಧ್ಯಮಗಳಾದ



ಟಿವಿ, ರೇಡಿಯೋ, ಕೇಬಲ್ ನೆಟವರ್ಕ, ಎಫ್‌ಎಂ ಚನಲ್, ಸಾರ್ವಜನಿಕ ಸ್ಥಳಗಳಲ್ಲಿ ಆಡಿಯೋ ವಿಜುವಲ್ ಡಿಸಪ್ಲೇ, ಇ-ನ್ಯೂಸ್ ಪೇಪರ, ಎಸ್.ಎಂ.ಎಸ್, ಸೋಸಿಯಲ್ ಮೀಡಿಯಾ, ಇಂಟರ್‌ನೆಟ್ ವೆಬ್‌ಸೈಟ್‌ಗಳಲ್ಲಿ ಚುನಾವಣಾ ಜಾಹೀರಾತುಗಳನ್ನು ನೀಡಬೇಕಾದಲ್ಲಿ ಎಂಸಿಎಂಸಿ ಸಮಿತಿಗೆ ಅಭ್ಯರ್ಥಿಗಳು ಮೂರು ದಿನಗಳ ಮುಂಚಿತವಾಗಿ ಸಲ್ಲಿಸಬೇಕು. ಪೇಯ್ಡ ನ್ಯೂಸ್ ಕೂಡಾ ಎಂಸಿಎಂಸಿ ವ್ಯಾಪ್ತಿಗೆ ಒಳಪಡುತ್ತಿರುವುದಾಗಿ ತಿಳಿಸಿದರು.

ಅಭ್ಯರ್ಥಿ ಹಾಗೂ ರಾಜಕೀಯ ಪಕ್ಷದವರು ಸಭೆ, ರ್‍ಯಾಲಿ, ವಾಹನ, ತಾತ್ಕಾಲಿಕ ಪಕ್ಷದ ಕಚೇರಿ, ಧ್ವನಿವರ್ಧಕ, ಹೆಲಿಕ್ಯಾಪ್ಟರ ಹಾಗೂ ಹೆಲಿಪ್ಯಾಡ್ ಪರವಾನಿಗೆ ಕೋರಿ ಸುವಿದಾ ಆ್ಯಪ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಈ ಆ್ಯಪ್‌ನಲ್ಲಿ ಸಲ್ಲಿಸಿದ ಅರ್ಜಿ ಯಾವ ಹಂತದಲ್ಲಿದೆ ಎಂಬುದನ್ನು ಪರಿಶೀಲಿಸಬಹುದಾಗಿದೆ. ಭಾರತ ಚುನಾವಣಾ ಆಯೋಗವು ಸಿವಿಜಿಲ್ ಆ್ಯಪ್ ಪ್ರಾರಂಭಿಸಿದ್ದು, ಈ ಆ್ಯಪ್ ಮೂಲಕ ಯಾವುದೇ ವ್ಯಕ್ತಿಯು ಚುನಾವಣೆಗೆ ಸಂಬಂಧಿಸಿದ ದೂರುಗಳನ್ನು ಸಲ್ಲಿಸಲು ಅವಕಾಶವಿರುತ್ತದೆ. ಅಲ್ಲದೇ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸ್ಥಾಪಿಸಲಾದ ದೂರು ನಿರ್ವಹಣಾ ಕೇಂದ್ರಕ್ಕೆ ಸಾರ್ವಜನಿಕರು 1950 ನಂಬರಿಗೆ ಕರೆ ಮಾಡಬಹುದಾಗಿದೆ ಎಂದರು.

ಜಿ.ಪಂ ಸಿಇಓ ಶಶಿಧರ ಕುರೇರ ಮಾತನಾಡಿ ಸದಾಚಾರ ನೀತಿ ಸಂಹಿತೆಗೆ ಹಲವು ತಂಡಗಳನ್ನು ರಚಿಸಲಾಗಿದ್ದು, ಅವುಗಳು ನಿರ್ವಹಿಸುವ ಕಾರ್ಯಗಳ ಬಗ್ಗೆ ತಿಳಿಸಿದರು. 50 ಸಾವಿರಕ್ಕಿಂತ ಹೆಚ್ಚಿಗೆ ಹಣ ದಾಖಲೆ ಇಲ್ಲದೇ ಇದ್ದರೆ ಜಪ್ತ ಮಾಡಲಾಗುತ್ತಿದೆ. ಈ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಬೇಕಿದೆ. ರಾಜಕೀಯ ವ್ಯಕ್ತಿಗಳಿಗೆ ಸಂಬಂಧಿಸಿದ ಹಣ ಇದ್ದರೆ ಪ್ರಕರಣ ದಾಖಲಿಸಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಮಾತನಾಡಿ ಬರುವ ಚುನಾವಣೆ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ 24 ಚೆಕ್‌ಪೋಸ್ಟಗಳನ್ನು ಹಾಕಲಾಗಿದ್ದು, ನೀತಿ ಸಂಹಿತೆ ಬಂದ ದಿನದಿಂದ ದಿನ 24 ಗಂಟೆಗಳ ಕಾಲ ಕಾರ್ಯನಿರ್ವಹಿಸಲಿವೆ. ಶಾಂತ, ನಿಷ್ಪಕ್ಷಪಾತವಾಗಿ ಚುನಾವಣೆ ನಡೆಸಲು ತಯಾರಿ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸಭೆಯಲ್ಲಿ ಯುಕೆಪಿ ಮಹಾವ್ಯವಸ್ಥಾಪಕ ರಮೇಶ ಕಳಸದ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಎಂಸಿಎಂಸಿ ಸಮಿತಿಯ ನೋಡಲ್ ಅಧಿಕಾರಿ ರವೀಂದ್ರ ಹಕಾಟಿ, ಚುನಾವಣಾ ತಹಶೀಲ್ದಾರ ಪಂಪಯ್ಯ, ಶಿರಸ್ತೇದಾರರಾದ ಮಹೇಶ ಪಾಂಡವ, ರಜಪೂತ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮತದಾರರ ವಿವರ

**ನರಗುಂದ ಮತಕ್ಷೇತ್ರ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 17,81,395 ಮತದಾರರಿದ್ದು, 883993 ಪುರುಷ, 897306 ಮಹಿಳಾ ಹಾಗೂ 96 ಇತರೆ ಮತದಾರರು ಇದ್ದಾರೆ. ಮುಧೋಳ ಮೀಸಲು ಮತಕ್ಷೇತ್ರದಲ್ಲಿ 100517 ಪುರುಷ, 105257 ಮಹಿಳಾ ಮತದಾರರು, 6 ಇತರೆ ಸೇರಿ ಒಟ್ಟು 2,05,780 ಮತದಾರರಿದ್ದರೆ, ತೇರದಾಳ ಕ್ಷೇತ್ರದಲ್ಲಿ 115655 ಪುರುಷ, 117003 ಮಹಿಳಾ, 13 ಇತರೆ ಸೇರಿ ಒಟ್ಟು 232671, ಜಮಖಂಡಿ ಮತಕ್ಷೇತ್ರದಲ್ಲಿ 109117 ಪುರುಷ, 111014 ಮಹಿಳಾ, 7 ಇತರೆ ಸೇರಿ ಒಟ್ಟು 220138, ಇದ್ದಾರೆ. ಬೀಳಗಿ ಕ್ಷೇತ್ರದಲ್ಲಿ 114784 ಪುರುಷ, 118094 ಮಹಿಳಾ, 16 ಇತರೆ ಸೇರಿ ಒಟ್ಟು 232894, ಬಾದಾಮಿ ಕ್ಷೇತ್ರದಲ್ಲಿ 112449 ಪುರುಷ, 111713 ಮಹಿಳಾ, 14 ಇತರೆ ಸೇರಿ ಒಟ್ಟು 224176, ಬಾಗಲಕೋಟೆ ಕ್ಷೇತ್ರದಲ್ಲಿ 123276 ಪುರುಷ, 126089 ಮಹಿಳಾ, 20 ಇತರೆ ಸೇರಿ ಒಟ್ಟು 249385, ಹುನಗುಂದ ಕ್ಷೇತ್ರದಲ್ಲಿ 112253 ಪುರುಷ, 113898 ಮಹಿಳಾ, 13 ಇತರೆ ಸೇರಿ ಒಟ್ಟು 226164 ಹಾಗೂ ನರಗುಂದ ಮತಕ್ಷೇತ್ರದಲ್ಲಿ 95942 ಪುರುಷ, 94238 ಮಹಿಳಾ ಹಾಗೂ 7 ಇತರೆ ಸೇರಿದಂತೆ ಒಟ್ಟು 190187 ಜನ ಮತದಾರರಿದ್ದಾರೆ.**

# ಶಾಲಾ ಮಕ್ಕಳಿಗೆ ರಾಗಿ ಮಾಲ್ಟ್ ವಿತರಣೆಗೆ ಶಾಸಕ ಭೀಮಸೇನ ಚಿಮ್ಮನಕಟ್ಟಿ ಚಾಲನೆ



**ಬಾದಾಮಿ :** ತಾಲೂಕಿನ ಆಡಗಲ್ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ನಡೆದ 2023–24ನೇ ಶೈಕ್ಷಣಿಕ ವರ್ಷದಿಂದ ತಾಲೂಕಿನ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಬಹುಪೌಷ್ಠಿಕಾಂಶವುಳ್ಳ ಸಾಯಿ ಶ್ಯೂರ್ ರಾಗಿ ಮಾಲ್ಟ್ ಹೆಲ್ತ್ ಮಿಕ್ಸ್ ವಿತರಿಸುವ ಕಾರ್ಯಕ್ರಮಕ್ಕೆ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಚಾಲನೆ ನೀಡಿ ಮಾತನಾಡಿದರು.

ನಂತರ ಮಾತನಾಡಿದ ಶಾಸಕ ಭೀಮಸೇನ ಚಿಮ್ಮನಕಟ್ಟಿ ರಾಜ್ಯದ 55 ಲಕ್ಷ ಸರ್ಕಾರಿ ಶಾಲೆ ಮಕ್ಕಳ ಮಾನಸಿಕ ದೈಹಿಕ ಆರೋಗ್ಯಕ್ಕಾಗಿ ರಾಗಿ ಮಾಲ್ಟ್ ವಿತರಣೆ ಮಾಡಲು ಶುರು ಮಾಡಿದ್ದೇವೆ. ಉತ್ತಮ ಪೌಷ್ಠಿಕಾಂಶ ಉತ್ತಮ ಶಿಕ್ಷಣಕ್ಕೆ ರಹದಾರಿಯಾಗಲಿದೆ. ಈಗಾಗಲೇ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ವಾರದಲ್ಲಿ ಐದು ದಿನ ಹಾಲು ಕೊಡುವ ಕ್ಷೀರಭಾಗ್ಯ ಯೋಜನೆಯನ್ನು ಆರಂಭಿಸಲಾಗಿದೆ. ಈಗ ಅತ್ಯಂತ ಪೌಷ್ಠಿಕವಾದ ರಾಗಿ ಮಾಲ್ಟ್ ಕೊಡುವ ಕಾರ್ಯಕ್ರಮ ಶುರುವಾಗಿದೆ. ಇದರಿಂದ ಮಕ್ಕಳ ಮಾನಸಿಕ ಮತ್ತು ದೈಹಿಕ ಆರೋಗ್ಯ ವೃದ್ಧಿಯಾಗುತ್ತದೆ. ಮಕ್ಕಳಿಗೆ ರಕ್ತಹೀನತೆ ಬರಲೇಬಾರದು. ಪೌಷ್ಠಿಕಾಂಶ ಕೊರತೆ ಆಗಲೇಬಾರದು. ಆಗ ಮಾತ್ರ ಮಕ್ಕಳು ಮಾನಸಿಕವಾಗಿ ಸದೃಡವಾಗಿ ಓದಿನಲ್ಲಿ ಹೆಚ್ಚು ಚುರುಕಾಗುತ್ತಾರೆ. ಗುಣಮಟ್ಟದ ಶಿಕ್ಷಣ ಪಡೆದುಕೊಳ್ಳುತ್ತಾರೆ. ಶ್ರೀಮಂತರ ಮಕ್ಕಳ ರೀತಿ ಬಡವರು, ಶ್ರಮಿಕರು, ದಲಿತ, ಶೂದ್ರರ ಮಕ್ಕಳಿಗೂ ಉತ್ತಮ ಶಿಕ್ಷಣ ದೊರೆಯಬೇಕು. ಏಕೆಂದರೆ ಮಕ್ಕಳೇ ದೇಶದ, ಸಮಾಜದ ಭವಿಷ್ಯವನ್ನು ರೂಪಿಸುತ್ತಾರೆ. ಶಿಕ್ಷಣದಿಂದ ಮಾತ್ರ ಸ್ವಾಭಿಮಾನ ಹೆಚ್ಚಾಗಲು ಸಾಧ್ಯ. ಜ್ಞಾನದ ಬೆಳವಣಿಗೆ ಶಿಕ್ಷಣದಿಂದ ಸಾಧ್ಯ. ಶಿಕ್ಷಣ ಅಂದರೆ ಕೇವಲ ಓದು, ಬರಹ ಕಲಿಸುವುದಲ್ಲ. ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ವೈಚಾರಿಕತೆಯುಳ್ಳ ಶಿಕ್ಷಣ ಅಗತ್ಯ ಎಂದರು. ಕ್ಷೇತ್ರ ಸಮನ್ವಯಾಧಿಕಾರಿ ಹಾಗೂ ಪ್ರಭಾರಿ ತಾಲೂಕಾ ಅಕ್ಷರದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಎಂ.ಬಿ.ದೊಡ್ಡಪ್ಪನ್ನವರ ಕಾರ್ಯಕ್ರಮದ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಮಾಜಿ ಪುರಸಭೆ ಸದಸ್ಯ ಶಿವಕುಮಾರ ಹಿರೇಮಠ, ಕೋನಪ್ಪ ಕಾಟನ್ನವರ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಎಂ.ಎ.ಹದ್ಲಿ, ಸಮೂಹ ಸಂಪನ್ಮೂಲ ವ್ಯಕ್ತಿ ಲೋಕೇಶ ಪಡಿಯಪ್ಪನ್ನವರ, ಶಿಕ್ಷಕ ಎನ್.ಡಿ.ಗೊರವರ, ಎಸ್.ಡಿ.ಎಂ.ಸಿ.ಪದಾಧಿಕಾರಿಗಳು, ಗ್ರಾ.ಪಂ.ಸದಸ್ಯರು, ಶಾಲಾ ಮಕ್ಕಳು, ಶಿಕ್ಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಗುಹಾಂತರ ದೇವಾಲಯ ವೀಕ್ಷಣೆ ಮಾಡಿದ ಮೂರುಸಾವಿರ ಮಠದ ಶ್ರೀಗಳು

**ಬಾದಾಮಿ :** ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳು ಹಾಗೂ ಶಿವಯೋಗಮಂದಿರ ಸಂಸ್ಥೆಯ ಅಧ್ಯಕ್ಷರಾದ ಪೂಜ್ಯ ಡಾ.ಗುರುಸಿದ್ದರಾಜಯೋಗೇಂದ್ರ ಮಹಾಸ್ವಾಮಿಗಳವರು ತಮ್ಮ ಬಹುದಿನಗಳ ಆಶಯದಂತೆ ಸೋಮವಾರ ಬಾದಾಮಿ ನಗರದ ಗುಹಾಂತರ ದೇವಾಲಯಗಳನ್ನು ವೀಕ್ಷಣೆ ಮಾಡಿದರು.



ಶೈವ ವೈಷ್ಣವ, ಹಾಗೂ ಜೈನ ಪರಂಪರೆಗೆ ಸೇರಿದ ಈ ದೇವಾಲಯಗಳ ಮಹತ್ವವನ್ನು ಹಾಗೂ ಚಾಲುಕ್ಯರ ವಾಸ್ತು ಶಿಲ್ಪ ಬಗೆಗಿನ ಅತಿಯಾದ ಪ್ರೀತಿ ಮತ್ತು ವಿಶ್ವಾಸವನ್ನು ಪ್ರವಾಸಿ ಮಾರ್ಗದರ್ಶಿ ಚಂದ್ರು ಕಟಗೇರಿ ಇವರು ಪೂಜ್ಯರಿಗೆ ತಿಳಿಯಪಡಿಸಿದರು. ಧರ್ಮ ಸಮನ್ವಯತೆ, ವಾಸ್ತುಶಾಸ್ತ್ರ, ಶಿಲ್ಪಶಾಸ್ತ್ರ, ಅವುಗಳ ಕ್ರಮಬದ್ಧತೆ ಹಾಗೂ ಮುಂದಿನ ಪೀಳಿಗೆಗೆ ನಮ್ಮ ಧರ್ಮ ಪರಂಪರೆಯ ಪ್ರತೀಕವಾಗಿರುವ ಪುರಾಣಗಳನ್ನು ಒಳಗೊಂಡಂತೆ ಮುಂದಿನ ಪೀಳಿಗೆಗೆ ಚಾಲುಕ್ಯರ ಸಾಧನೆಗಳನ್ನು ತಿಳಿಸುವ ಮಾದ್ಯಮಗಳಾಗಿವೆ ಈ ದೇವಾಲಯಗಳು ಎಂದು ಪೂಜ್ಯರು ಅಭಿಪ್ರಾಯ ಪಟ್ಟರು. ಒಟ್ಟು ಭಾರತದ ಇತಿಹಾಸದಲ್ಲಿ ಬಾದಾಮಿ ಚಾಲುಕ್ಯರಿಗೆ ಇರಬೇಕಾದ ಸ್ಥಾನಮಾನಗಳನ್ನು ಅವರ ಘನತೆಯನ್ನು ಈ ಶಿಲ್ಪಗಳು ನಾಡಿನ ಜನತೆಗೆ ಪ್ರದರ್ಶಿಸುತ್ತಿರುವುದು ಕನ್ನಡಿಗರ ಹೆಮ್ಮೆಯಾಗಿದೆ.

ಈ ಸಂದರ್ಭದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಶ್ರೀ ಸದಾಶಿವ ಸ್ವಾಮೀಜಿ, ಅಕ್ಕಿಆಲೂರಿನ ಶಿವಬಸವ ಸ್ವಾಮೀಜಿ, ಲಿಂಗನಾಯಕನಹಳ್ಳಿಯ ಶ್ರೀ ನಿರಂಜನ ದೇವರು, ತೆಲಸಂಗದ ಶ್ರೀ ವಿರೇಶ ದೇವರು, ಗದಗ ನಗರದ ಶ್ರೀ ಚಂದ್ರಶೇಖರ ದೇವರು, ಧಾರವಾಢದ ಶ್ರೀ ಶಿವಬಸವ ದೇವರು ಹಾಗೂ ಕೊಡಗಾನೂರಿನ ಡಾ.ಶ್ರೀ ಕುಮಾರ ದೇವರು ಉಪಸ್ಥಿತರಿದ್ದರು.

# ಗ್ಯಾರಂಟಿ ಯೋಜನೆಗಳ ಮಾಹಿತಿ ಪ್ರದರ್ಶನಕ್ಕೆ ಮೇಟಿ ಚಾಲನೆ

**ಬಾಗಲಕೋಟೆ:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ನವನಗರದ ಬಸ್ ನಿಲ್ದಾಣದಲ್ಲಿ ಏರ್ಪಡಿಸಿರುವ ಸರಕಾರದ ಪಂಚ ಗ್ಯಾರಂಟಿ ಯೋಜನೆಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳ ಮಾಹಿತಿ ಒಳಗೊಂಡ ವಸ್ತು ಪ್ರದರ್ಶನಕ್ಕೆ ಶಾಸಕರು ಆಗಿರುವ ಬಿಟಿಡಿಎ ಅಧ್ಯಕ್ಷ ಹೆಚ್.ವಾಯ್.ಮೇಟಿ ಮಂಗಳವಾರ ಚಾಲನೆ ನೀಡಿದರು.



ಮಾರ್ಚ 12 ರಿಂದ 14 ರವರೆಗೆ ಪ್ರದರ್ಶನಗೊಳ್ಳುವ ವಸ್ತು ಪ್ರದರ್ಶನ ಮಳಿಗೆಗೆ ಚಾಲನೆ ನೀಡಿ ನಂತರ ಸರಕಾರದ ವಿವಿಧ ಯೋಜನೆಗಳ ಮಾಹಿತಿ ಫಲಕಗಳನ್ನು ವೀಕ್ಷಿಸಿದರು. ಮಾಹಿತಿ ಪ್ರದರ್ಶನದಲ್ಲಿ ಕೃಷಿಯನ್ನು ಉತ್ತೇಜಿಸುವ ಕರ್ನಾಟಕ ರೈತ ಸಮೃದ್ಧಿ ಯೋಜನೆ, ಸರಕಾರದಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮಂಜೂರಾದ ಜಮೀನುಗಳಿಗೆ ಅನಧಿಕೃತ ಪರಭಾರೆಯಿಂದ ರಕ್ಷಣೆ ನೀಡುವ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ, ಮುಖ್ಯಮಂತ್ರಿಗಳ ಐತಿಹಾಸಿಕ ಜನಸ್ಪಂದನ ಕಾರ್ಯಕ್ರಮ, ಹಸಿವು ಮುಕ್ತ ಕರ್ನಾಟಕ, ಸಬಲೀಕರಣದತ್ತ ಮಹಿಳೆಯರ ಪಯಣ.

ಮನೆ ಮನ ಬೆಳಗಿದ ಭಾಗ್ಯದ ಬೆಳಕು, ಸ್ತ್ರೀ ಸ್ವಾವಲಂಬನೆಯತ್ತ ದಿಟ್ಟಹೆಜ್ಜೆ, ಯುವಕರ ಶ್ರೇಯೋಭಿವೃದ್ದಿ, ಸ್ಥಳೀಯ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರದ ಜನಸ್ಪಂದನ ಕಾರ್ಯಕ್ರಮ, ಕ್ಷೀರಭಾಗ್ಯಕ್ಕೆ ಹತ್ತರ ಸಂಭ್ರಮ, ಆಯವ್ಯಯ ಮಂಡನೆಯಲ್ಲಿ ಚರಿತ್ರಾರ್ಹ ದಾಖಲೆ ನಿರ್ಮಿಸಿದ ಮುಖ್ಯಮಂತ್ರಿಗಳ ಸೇರಿದಂತೆ ಅನೇಕ ಜನಪರ ಯೋಜನೆಗಳ ಮಾಹಿತಿ ಫಲಕಗಳನ್ನು ಅಳವಡಿಸಲಾಗಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

ಕಾರ್ಯಕ್ರಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕಿ ಕಸ್ತೂರಿ ಪಾಟೀಲ, ಬಾಗಲಕೋಟೆ ಘಟಕ ವ್ಯವಸ್ಥಾಪಕ ಅಶೋಕ ಕೋರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬನಶ್ರೀ ರೈತ ಉತ್ಪಾದಕ ಸಹಕಾರಿ ಸಂಘದ ನೂತನ ಕಟ್ಟಡ ಉದ್ಘಾಟನೆ

**ಬಾದಾಮಿ :** ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಐ.ಸಿ.ಎ.ಆರ್ ಕೃಷಿ ವಿಜ್ಞಾನ ಕೇಂದ್ರ ಬಾಗಲಕೋಟ, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಮಂಡಳಿ ನವದೆಹಲಿ ಇವರ ಸಹಯೋಗದಲ್ಲಿ

ತಾಲೂಕಿನ ಆಲದಕಟ್ಟಿ ಕ್ರಾಸ್ ನಲ್ಲಿ ಹೊಸದಾಗಿ ಪ್ರಾರಂಭವಾಗುತ್ತಿರುವ ಬನಶ್ರೀ ರೈತ ಉತ್ಪಾದಕ ಸಹಕಾರಿ ಸಂಘದ ನೂತನ ಕಟ್ಟಡವನ್ನು ಶಾಸಕ ಭೀಮಸೇನ



ಚಿಮ್ಮನಕಟ್ಟಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನರಸಾಪುರ ಗ್ರಾಮದ ಹಿರೇಮಠದ ಶ್ರೀ ಷ.ಬ್ರ. ಮರುಳಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಜಿಲ್ಲಾ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಎಸ್.ಬಿ. ಪಾಟೀಲ್, ಸಹಾಯಕ ಪ್ರಾಧ್ಯಾಪಕ ಶ್ರೀಪಾದ ವಿಶ್ವೇಶ್ವರ, ಬಾಳನಗೌಡ ಪಾಟೀಲ, ಅಶೋಕ ತಿರಕ್ಕನ್ನವರ, ಬನಶ್ರೀ ರೈತ ಉತ್ಪಾದಕ ಸಹಕಾರಿ ಸಂಘದ ಅಧ್ಯಕ್ಷ ಅಶೋಕ ಜಾಲಿಹಾಳ, ಉಪಾಧ್ಯಕ್ಷ ಕಾಮಣ್ಣ ಜಾಲಿಹಾಳ ಸೇರಿದಂತೆ ಸಂಘದ ಸದಸ್ಯರು,ನಮ್ಮ ಭಾಗದ ರೈತರು ಭಾಗವಹಿಸಿದ್ದರು.

# ಇನಾಂ ಹುಲ್ಲಿಕೇರಿ ಕೆರೆ ಕಾಮಗಾರಿ ಪರಿಶೀಲಿಸಿದ ಶಾಸಕ ಜೆ.ಟಿ.ಪಾಟೀಲ

**ಬಾದಾಮಿ :** ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ನಡೆಯುತ್ತಿರುವ ಇನಾಂ ಹುಲ್ಲಿಕೇರಿ ಗ್ರಾಮದ ನಮ್ಮೂರ ಕೆರೆ ಕಾಮಗಾರಿಯನ್ನು ಬೀಳಗಿ ಶಾಸಕ ಜೆ.ಟಿ.ಪಾಟೀಲ ಪರಿಶೀಲನೆ ನಡೆಸಿದರು.



ನಮ್ಮೂರು ನಮ್ಮ ಕೆರೆ ಎಂಬದರಡಿಯಲ್ಲಿ ತಾಲೂಕಿನ ಇನಾಂ ಹುಲ್ಲಿಕೇರಿ ಗ್ರಾಮದ ಕೆರೆ ಕಾಮಗಾರಿ ನಡೆಯುತ್ತಿರುವ ಜಾಗಕ್ಕೆ ಶಾಸಕರು ಭೇಟಿ ನೀಡಿ ಕೆರೆ ಕಾಮಗಾರಿ ವೀಕ್ಷಣೆ ಮಾಡಿದರು. ನಂತರ ಮಾತನಾಡಿದ ಅವರು ಶ್ರೀ ಧರ್ಮಸ್ಥಳ ಧರ್ಮಧಿಕಾರಿಗಳು ರಾಜ್ಯಾದ್ಯಂತ ಒಳ್ಳೆಯ ಯೋಚನೆ ಮತ್ತು ಯೋಜನೆಗಳನ್ನು ಹಾಕಿಕೊಂಡು ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಕೆಲಸ ಮಾಡುತಿದ್ದಾರೆ ಕೆರೆ ರಚನೆ ಮಾಡುವುದರಿಂದ ರೈತರಿಗೆ ದನ ಕರುಗಳಿಗೆ ಪಕ್ಷಿಗಳಿಗೆ ಉಪಯೋಗ ಆಗುತ್ತದೆ ಇದೊಂದು ಉತ್ತಮ ಕೆಲಸ ಎಂದು ತಿಳಿಸಿದರು. ಬಾದಾಮಿ ತಾಲೂಕಿನಲ್ಲಿ ಇದುವರೆಗೆ 5 ಕೆರೆಗಳನ್ನು ಮಾಡಿಸಿರುವ ಪೂಜ್ಯ ವೀರೇಂದ್ರ ಹೆಗ್ಗಡೆಯವರಿಗೆ ಕೈಮುಗಿದು ಅಭಿನಂದನೆಗಳನ್ನು ತಿಳಸಿದರು. ಈ ಸಂದರ್ಭದಲ್ಲಿ ಮಾಜಿ ಜಿ.ಪಂ.ಸದಸ್ಯ ಡಾ.ಎಂ.ಜಿ.ಕಿತ್ತಲಿ, ಬಿ.ಕೆ. ಕೋವಳ್ಳಿ, ಕೃಷಿ ಅಧಿಕಾರಿ ನಾಗೇಶ್ ಎಸ್ ಕೆ.ಕುಮಾರ ಹಡಪದ, ಯಲ್ಲಪ್ಪ ಕಿತ್ತಲಿ, ರವಿ ಲಮಾಣಿ. ಗ್ರಾ.ಪಂ.ಅಧ್ಯಕ್ಷೆ ಶ್ರೀದೇವಿ ಲಮಾಣಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಮಹಿಳಾ ವಿವಿಯ ಪಿ.ಎಚ್.ಡಿ. ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ಖಂಡಿಸಿ ಪ್ರತಿಭಟನೆ

## ಪ್ರೊ. ಮಲ್ಲಿಕಾರ್ಜುನಗೆ ನೌಕರಿಯಿಂದ ವಜಾಗೊಳಿಸುವಂತೆ ಒತ್ತಾಯ



**ವರದಿ:ಲಾಲಸಾಬ ಸವಾರಗೋಳ**

**ವಿಜಯಪುರ :** ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಪಿಎಚ್.ಡಿ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಪ್ರೋ. ಮಲ್ಲಿಕಾರ್ಜುನ ಎನ್.ಎಲ್ ಅವರ ಮೇಲೆ ಶಿಸ್ತುಕ್ರಮ ಕೈಗೊಂಡು ನೌಕರಿಯಿಂದ ವಜಾಗೊಳಿಸುವಂತೆ ಆಗ್ರಹಿಸಿ ಜಯಕರ್ನಾಟಕ ಸಂಘಟನೆಯ ವಿಜಯಪುರ ಜಿಲ್ಲಾ ಮಹಿಳಾ ಮೋರ್ಚಾ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಿ ವಿಜಯಪುರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಜಯ ಕರ್ನಾಟಕ ಮಹಿಳಾ ಸಂಘಟನೆ ಜಿಲ್ಲಾಧ್ಯಕ್ಷೆ ವೀಣಾ ಕುಂದನಗಾರ ಮಾತನಾಡಿ, ಕಳೆದೆರಡು ವಾರಗಳ ಹಿಂದೆ ಪ್ರತಿಷ್ಠಿತ ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಪಿಎಚ್.ಡಿ ಪದವಿ ಪಡೆಯುತ್ತಿರುವ ವಿದ್ಯಾರ್ಥಿನಿಗೆ ಮ್ಯಾನೇಜ್ ಮೆಂಟ್ ವಿಭಾಗದ ಮುಖ್ಯಸ್ಥ ಪ್ರೊ. ಮಲ್ಲಿಕಾರ್ಜುನ ಎನ್.ಎಲ್ ಎಂಬುವವರು ಲೈಂಗಿಕ ಕಿರುಕುಳ ನೀಡಿರುವ ಆರೋಪ ಕೇಳಿ ಬಂದಿರುತ್ತದೆ. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ರಾಜ್ಯದಲ್ಲಿಯೇ ಏಕೈಕ ಮಹಿಳಾ ವಿಶ್ವವಿದ್ಯಾನಿಲಯವಾಗಿದ್ದು ಈ ವಿದ್ಯಾನಿಲಯದಲ್ಲಿ ಕಡು ಬಡವ ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿನಿಯರಿಗೆ ಅನುಕೂಲಕರವಾಗಿರಲಿ ಹಾಗೂ ಶಿಕ್ಷಣದಿಂದ ವಂಚಿತರಾಗಬಾರದೆಂದು ಮನಗಂಡ ಸರ್ಕಾರಗಳು ಪ್ರತಿಷ್ಠಿತ ವಿಶ್ವವಿದ್ಯಾನಿಲಯವನ್ನು ಅತೀ ಹಿಂದುಳಿದ ಬರಗಾಲ ಪೀಡಿತ ವಿಜಯಪುರ ಜಿಲ್ಲೆಯಲ್ಲಿ ಸ್ಥಾಪನೆ ಮಾಡಿದೆ ಎಂದರು.

ಈ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಸಾವಿರಾರು ವಿದ್ಯಾರ್ಥಿನಿಯರು ಹಲವು ಸಂಕಟ ತಾಪತ್ರಯಗಳ ಮಧ್ಯ ಶಿಕ್ಷಣ ಪಡೆಯುತ್ತಿರುವುದು ಹೆಮ್ಮೆಯ ಸಂಗತಿ. ಅದರಲ್ಲಿ ಸಾಕಷ್ಟು ವಿದ್ಯಾರ್ಥಿನಿಯರು ಚಿನ್ನದ ಪದಕಗಳನ್ನು ಪಡೆದುಕೊಂಡು ರಾಜ್ಯಕ್ಕೆ ಕೀರ್ತಿ ತಂದಂತಹ ಹೆಮ್ಮೆ ನಮ್ಮದು. ಅಂತಹದರಲ್ಲಿ ಇಂತಹ ನೀಚ ಕೃತ್ಯವೆಸಗುತ್ತಿರುವ ಮೃಗಕ್ಕೆ ಸಮಾನವಾಗಿರುವ ಮಾನವ ರಾಕ್ಷಸರು ಈ ವಿಶ್ವವಿದ್ಯಾನಿಲಯದಲ್ಲಿ ಸೇರಿಕೊಂಡಿರುವುದು ದುರಂತದ ಸಂಗತಿ. ಈಗಾಗಲೇ ನೊಂದ ವಿದ್ಯಾರ್ಥಿನಿ ಕುಲಸಚಿವರು ಹಾಗೂ ಕುಲಪತಿಗಳಿಗೆ ಲಿಖಿತ ರೂಪದಲ್ಲಿ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದರೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾಗಿತ್ತು. ಕೂಡಲೇ ಕ್ರಮ ಜರುಗಿಸಬೇಕಾಗಿತ್ತು . ಆದರೆ ಯಾವುದೇ ಕ್ರಮ ಕೈಗೊಂಡಿರುವದಿಲ್ಲ. ಯಾವುದೇ ಆಸಕ್ತಿ ತೋರದೆ ಆಂತರಿಕ ತನಿಖಾ ವಿಭಾಗಕ್ಕೆ ಹಸ್ತಾಂತರಿಸಿ ಕೈ ತೊಳೆದುಕೊಂಡಿದ್ದಾರೆ. ಇದು ನೋವಿನ ಸಂಗತಿಯಾಗಿದೆ. ಈಗಾಗಲೇ ಈ ವಿಶ್ವವಿದ್ಯಾನಿಲಯದಲ್ಲಿ ಹಲವು ಹಗರಣಗಳು ಕೇಳಿ ಬಂದಿದ್ದು,ಮತ್ತು ಈ ಒಂದು ಲೈಂಗಿಕ ದೌರ್ಜನ್ಯಕ್ಕೀಡಾದ ವಿದ್ಯಾರ್ಥಿನಿಯರ ಬಗ್ಗೆ ಯಾವುದೇ ಕಳಕಳಿ ವಹಿಸದೆ ಅವರ ಜೀವನದಲ್ಲಿ ಆಟವಾಡುತ್ತಿರುವುದು ಕಂಡು ಬರುತ್ತಿದೆ. ಇದೇ ರೀತಿ ಹಲವು ರೀತಿಯ ಲೈಂಗಿಕ ದೌರ್ಜನ್ಯಗಳು ನಡೆದಿರಬಹುದಾದಂತಹ ವಿಷಯಗಳು ಸಾಕಷ್ಟಿದ್ದರೂ ಕೂಡಾ ಇವತ್ತು ವಿದ್ಯಾರ್ಥಿನಿಯರು ಮಾನ ಮರ್ಯಾದೆಗೆ ಹೆದರಿ ಈ ವಿಷಯಗಳನ್ನು ಮುಚ್ಚಿಟ್ಟಿರುವುದು ಕಂಡು ಬಂಧಿದೆ. ಸದ್ಯ ನಡೆದಿರುವ ಲೈಂಗಿಕ ಕಿರುಕುಳವನ್ನು ಗಂಭೀರವಾಗಿ ಪರಿಗಣಿಸಬೇಕು. ನೊಂದ ವಿದ್ಯಾರ್ಥಿನಿಯರಿಗೆ ಧೈರ್ಯ ತುಂಬುವಂತಾಗಬೇಕು ಎಂದರು.

ಲೈಂಗಿಕ ಕಿರುಕುಳದ ಆರೋಪ ಹೊತ್ತಿರುವ ಮಲ್ಲಿಕಾರ್ಜುನ ಎನ್.ಎಲ್ ಅವರ ಮೇಲೆ ಸೂಕ್ತ ಕಾನೂನು ಕ್ರಮ ಗೊಳ್ಳಬೇಕು. ಅವರನ್ನು ನೌಕರಿಯಿಂದ ವಜಾಗೊಳಿಸಿ ನೊಂದ ವಿದ್ಯಾರ್ಥಿನಿಯರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಸಂಘಟನೆಯ ಜಿಲ್ಲಾ ಮುಖಂಡರಾದ ಶಿವಗಂಗಾ ಕಟ್ಟಿಮನಿ, ಕಾರ್ಯಾಧ್ಯಕ್ಷ ಸಂಗಮೇಶಗೌಡ ದಾಶ್ಯಾಳ,

ಜಿಲ್ಲಾ ಉಪಾಧ್ಯಕ್ಷೆ ಕವಿತಾ ಅಳ್ಳೊಳ್ಳಿ, ಕಾರ್ಯದರ್ಶಿ ಮಲ್ಲಮ್ಮ ಲಮಾಣಿ, ಸುವರ್ಣಾ ಹಳ್ಳಿ, ನಗರ ಅಧ್ಯಕ್ಷೆ ಅಶ್ವಿನಿ ಸಾವಂತ, ಬೇಬಿ ತಳವಾರ, ಸುಜಾತಾ ಕರಕಲ್, ಶಕುಂತಲಾ ಚವ್ಹಾಣ, ನೀಲಾಂಬಿಕಾ ಬಿರಾದಾರ, ಬಿಸ್ಮಿಲ್ಲಾ ಬಾಗವಾನ, ಸಾಗರ ಎನ್. ಜಾಧವ, ರಾಜು ಮೋಹಿತೆ, ಅಣ್ಣಪ್ಪ ಕೋಳಿ, ರಾಜಶ್ರೀ ತಳವಾರ, ಪಿಂಟು ಗೊಬ್ಬೂರ, ಇಸ್ಮಾಯಿಲ್ ಬರಗುಡಿ, ಮುಖದಸ್ ಇನಾಮದಾರ, ಅಮೀನ ಚಟ್ಟರಕಿ, ರಾವುತ ಆಸಂಗಿಹಾಳ ಇತರರು ಉಪಸ್ಥಿತರಿದ್ದರು.

# ಕಣ್ಣಿಗೆ ಕಾಣುವ ದೇವರೇ ತಾಯಿ: ಶ್ರೀಮತಿ ಆಲೂರ

**ಬಾಗಲಕೋಟೆ :** ಅಜ್ಜಿ, ಅವ್ವ, ಅತ್ತಿಗೆ, ಮಡದಿ, ಮಗಳು ಹೀಗೆ ಮಹಿಳೆ ಮನುಷ್ಯನ ಜೀವನದಲ್ಲಿ ಕಾಣಿಸಿಕೊಂಡು ಅತ್ಯಂತ ಪ್ರಮುಖ ಸ್ಥಾನ ವಹಿಸುತ್ತಾಳೆ. ಕಣ್ಣಿಗೆ ಕಾಣುವ ದೇವರೇ ತಾಯಿಯಾಗಿದ್ದಾಳೆ ಎಂದು ವಿಶ್ರಾಂತ ಪ್ರಾಂಶುಪಾಲೆ ಶ್ರೀಮತಿ ಪಾರ್ವತಿ ಆಲೂರ ಹೇಳಿದರು.



ಅವರು ದಿ.12ರಂದು ನಗರದ ಚರಂತಿಮಠ ಶಿವಾನುಭವ ಮಂಟಪದಲ್ಲಿ ಕರ್ನಾಟಕ ರಾಜ್ಯ ಬಣಜಿಗ ಸಮಾಜ ಕ್ಷೇಮಾಭಿವೃದ್ಧಿ ಸಂಘ (ರಿ) ಬೆಂಗಳೂರು ಬಾಗಲಕೋಟ ತಾಲೂಕ ಮಹಿಳಾ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್‍ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತ ಮಹಿಳಾ ದಿನಾಚರಣೆ ನಡೆದು ಬಂದ ಬಗ್ಗೆ ವಿವರವಾಗಿ ತಿಳಿಸಿದರು.

ಮಹಿಳೆ ತಮ್ಮ ಜೀವನದಲ್ಲಿ ಮಗಳಾಗಿ, ತಾಯಿಯಾಗಿ, ಸಹೋದರಿಯಾಗಿ, ಮಡದಿಯಾಗಿ ಅತ್ತೆಯಾಗಿ, ಸೊಸೆಯಾಗಿ ಅನೇಕ ಸ್ತರಗಳಲ್ಲಿ ಕಾರ್ಯನಿರ್ವಹಿಸಿ ಉತ್ತಮ ಸಂಸ್ಕಾರವನ್ನು ನೀಡುವುದರ ಜೊತೆಗೆ ಸಮಾಜಮುಖಿ ಬೆಳೆಯುತ್ತಾಳೆ ಎಂದರು.

ಮಹಿಳೆ ಎಂದರೆ 'ಮಹಾ+ಇಳೆ' ಎಂದು ಅದನ್ನು ಅರ್ಥಪೂರ್ಣವಾಗಿ ವಿವರಿಸಿ ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಆರ್ಥಿಕ ಸಬಲತೆಯನ್ನು ಸಾಧಿಸುತ್ತಿದ್ದಾರೆ ಎಂದು ತಿಳಿಸಿದರು.

ಅಕ್ಕಮಹಾದೇವಿ, ಜಯದೇವಿ ತಾಯಿ ಲಿಗಾಡೆ ಅವರು ವಚನ ಸಾಹಿತ್ಯಕ್ಕೆ ನೀಡಿರುವ ಕೊಡುಗೆಯನ್ನು ತಿಳಿಸಿ ಇಂದು 10ಕ್ಕೂ ಅಧಿಕ ಜಿಲ್ಲೆಗಳಲ್ಲಿ ಮಹಿಳೆಯರು ಜಿಲ್ಲಾಧಿಕಾರಿಗಳಾಗಿ ಜಿ.ಪಂ. ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳಾಗಿ, ನ್ಯಾಯಮೂರ್ತಿಗಳಾಗಿ ಸೇವೆಯನ್ನು ಸಲ್ಲಿಸುತ್ತಿರುವದು ಮಹಿಳೆಯರು ಏನನ್ನಾದರು ಸಾಧಿಸಬಲ್ಲರು ಎಂಬುದಕ್ಕೆ ಸಾಕ್ಷಿಯಾಗಿದೆ ಎಂದರು.

ಇನ್ನೋರ್ವ ಮುಖ್ಯ ಅತಿಥಿ ಪುಣೆಯ ಬಸವ ತಿಳುವಳಿಕೆ ಮತ್ತು ಸಂಶೋಧನಾ ಕೇಂದ್ರದ ಅಧ್ಯಕ್ಷ ಡಾ.ಶಶಿಕಾಂತ ಪಟ್ಟಣ ಮಾತನಾಡಿ ಬಣಜಿಗ ಸಮುದಾಯದ ಬೆಳವಣಿಗೆ ಇತಿಹಾಸದ ಬಗ್ಗೆ ತಿಳಿಸಿ ಬಣಜಿಗ ಸಮುದಾಯ ವಚನ ಸಾಹಿತ್ಯಕ್ಕೆ ಹಾಗೂ ಬಸವಧರ್ಮಕ್ಕೆ ನೀಡಿದ ಕೊಡುಗೆಯನ್ನು ವಿವರವಾಗಿ ತಿಳಿಸಿ ವಚನಗಳು ಪಚನವಾಗುವುದರ ಜೊತೆಗೆ ಅನುಸಂಧಾನವಾಗಬೇಕು ಲಿಂಗದ ಅರಿವನ್ನು ತಿಳಿದುಕೊಳ್ಳಬೇಕೆಂದು ತಿಳಿಸಿದರು.

ವಚನ ಸಾಹಿತ್ಯಕ್ಕೆ ಫ.ಗು.ಹಳಕಟ್ಟಿ, ಯಡೆಯೂರ ಸಿದ್ಧಲಿಂಗೇಶ್ವರರ ಸ್ವಾಮಿಜಿಯವರ ಕೊಡುಗೆಯನ್ನು ಸಮುದಾಯ ಸ್ಮರಿಸಬೇಕೆಂದು ತಿಳಿಸಿ 45ಕ್ಕೂ ಅಧಿಕ ರಾಜಮನೆತನಗಳನ್ನು ಬಣಜಿಗರು ಆಳಿದ್ದಾರೆ ಎಂದು ತಿಳಿಸಿದ ಅವರು ಬಣಜಿಗ ಸಮುದಾಯವು ರಾಷ್ಟ್ರವನ್ನು ಅಪ್ಪಿಕೊಂಡು ವಿಶಾಲ ಮನೋಭಾವ ಹೊಂದಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಾಗಲಕೋಟ ತಾಲೂಕ ಬಣಜಿಗ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಮೇಘಾ ಆನಂದ ಜಿಗಜಿನ್ನಿ ಮಾತನಾಡಿ ಮಹಿಳೆಯರು ಇಂದು ಎಲ್ಲ ರಂಗಗಳಲ್ಲಿ ಉತ್ತಮ ಸಾಧನೆಯನ್ನು ತೋರಿಸುತ್ತಿರುವದು ಹೆಮ್ಮೆಯ ವಿಷಯ ಮಹಿಳೆಯರು ಕೇವಲ ಮನೆಗೆ ಸಿಮೀತರಾಗದೇ ತಮ್ಮಲ್ಲಿರುವ ಪ್ರತಿಭೆಯನ್ನು ಹೊರ ಹಾಕಬೇಕು ತಾಲೂಕ ಮಹಿಳಾ ಘಟಕದಿಂದ ಈಗಾಗಲೇ ಅನೇಕ ಕಾರ್‍ಯಕ್ರಮಗಳನ್ನು ಯಶಸ್ವಿಗೊಳಿಸಿದ್ದೇವೆ ಮುಂಬರುವ ದಿನಗಳಲ್ಲಿ ಇನ್ನು ಹೆಚ್ಚು ಕ್ರೀಯಾಶೀಲವಾಗಿ ಕಾರ್ಯಚಟುವಟಿಕೆಗಳನ್ನು ನಡೆಸುವದಾಗಿ ತಿಳಿಸಿದರು.

ಬಾಗಲಕೋಟ ತಾಲೂಕ ಬಣಜಿಗ ಮಹಿಳಾ ಘಟಕದ ಗೌರವಾಧ್ಯಕ್ಷೆ ಶ್ರೀಮತಿ ಶಂಕ್ರಮ್ಮ ಮುಚ್ಚಂಡಿ, ಸಂಘಟನಾ ಕಾರ್ಯದರ್ಶಿ ಶ್ರೀಮತಿ ಚೈತ್ರಾ ರವಿ ಕುಮಟಗಿ ವೇದಿಕೆ ಮೇಲೆ ಆಸೀನರಾಗಿದ್ದರು.

ಕಾರ್‍ಯಕ್ರಮವೂ ಪಾರ್ವತಿ ಕಾಯಿ ಸಂಗಡಿಗರ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಶಿವಲೀಲಾ ಪಟ್ಟಣಶೆಟ್ಟಿ ಪ್ರಾಸ್ತಾವಿಕ ಮಾತನಾಡಿದರು. ಸಹನಾ ಜಿಗಜಿನ್ನಿ ಸ್ವಾಗತಿಸಿದರು. ಶಾರದಾ ದೇವಣಗಾಂವಿ ನಿರೂಪಿಸಿದರು. ಕೊನೆಗೆ ಮೀನಾಕ್ಷಿ ಜಿಗಜಿನ್ನಿ ವಂದಿಸಿದರು.

# ನಾನು ಟಿಕೆಟ್ ಆಕಾಂಕ್ಷಿಯಲ್ಲ, ದೇವರು ಮಾತ್ರ ನನಗೆ ಟಿಕೆಟ್ ತಪ್ಪಿಸಬಲ್ಲ: ಸಂಸದ ರಮೇಶ ಜಿಗಜಿಣಗಿ

**ವರದಿ:ಲಾಲಸಾಬ ಸವಾರಗೋಳ**

**ವಿಜಯಪುರ :** ನಾನು ಟಿಕೆಟ್ ಆಕಾಂಕ್ಷಿಯಲ್ಲ ನನಗೆ ಟಿಕೆಟ್ ಸಿಗುತ್ತದೆ. ನನ್ನ ಟಿಕೆಟ್ ತಪ್ಪಿಸಲು ದೇವರ ಹೊರತಾಗಿ ಬೇರೆ ಯಾರಿಂದಲೂ ಸಾಧ್ಯವಿಲ್ಲ. ಪ್ರಧಾನಿ ಮೋದಿಗೆ ದೈವಿಶಕ್ತಿ ಇದ್ದರೆ, ನನಗೆ ದೇವಿಶಕ್ತಿ ಇದೆ. ಸಮಯ ಹತ್ತಿರ ಬಂದಾಗ ನಿಮಗೆ ಗೊತ್ತಾಗಲಿದೆ ಎಂದು ಸಂಸದ ರಮೇಶ ಜಿಗಜಿಣಗಿ ವಿಜಯಪುರ ಕ್ಷೇತ್ರದಿಂದ ತಮಗೆ ಟಿಕೆಟ್ ಖಚಿತ ಎಂದು ಹೇಳಿಕೊಂಡಿದ್ದಾರೆ.



ಬುಧವಾರ ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬೇಕಾದಷ್ಟು ಹಣವಿದ್ದವರು ಹಣ ಕೊಡುತ್ತೇವೆಂದು ತಿರುಗಾಡಲಿ, ಅದು ಕೆಲಸಕ್ಕೆ ಬರಲ್ಲ, ಇದು ಗಟ್ಟಿ. ನನ್ನ ವಿರುದ್ಧ ಯಾರೂ ಏನೂ ಮಾಡಲಾಗಲ್ಲ. ನನಗೆ ಟಿಕೆಟ್ ಕೊಡುವ ಕುರಿತು ನನಗೂ ಹಾಗೂ ಜಿಲ್ಲಾಧ್ಯಕ್ಷರಿಗೆ ಎಲ್ಲಿಂದ ಮೆಸೇಜ್ ಬರಬೇಕೋ ಅಲ್ಲಿಂದ ಬಂದಿದೆ ಎನ್ನುವ ಮೂಲಕ ತಾವೇ ಮತ್ತೊಮ್ಮೆ ಬಿಜೆಪಿ ಅಭ್ಯರ್ಥಿ ಎಂದರು.

ರಾಜಕೀಯವಾಗಿ ನನಗೆ ವಿರೋಧ ಮಾಡಲು ಬಂದವರು ಯಾರೂ ರಾಜಕೀಯವಾಗಿ ಉಳಿದಿಲ್ಲ ಎಂದು ಪುನರುಚ್ಚರಿಸಿದ ಜಿಗಜಿಣಗಿ, ನಾನು ಎಂದು ಆಕ್ರೋಶವಾಗಿ ಮಾತನಾಡಿಲ್ಲ, ನೀವು ಆಕ್ರೋಶವಾಗಿ ಮಾಡಿದರೆ ನಾನು ಹೀಗೆ ಮಾತನಾಡುವೆ ಎಂದು ಪತ್ರಕರ್ತರಿಗೆ ಪ್ರತಿಕ್ರಿಯಿಸಿದರು.

71 ವರ್ಷವಾದರೂ ನಾನು ಉಳಿದಿದ್ದೇನೆ, ಅವರು ಒಬ್ಬರಾದರೂ ಇದ್ದಾರಾ? ನನ್ನ ವಿರೋಧಿಸಿದವರಿಗೆ ಅದು ದೇವರು ಕೊಟ್ಟ ಶಿಕ್ಷೆ, ಯಾರು ಏನು ಮಾಡಲಾಗಲ್ಲ. ನಾನು ಇತಿಹಾಸ ನಿರ್ಮಾಣ ಮಾಡೇ ಮಾಡುತ್ತೇನೆ. ಆದರೆ ಅದನ್ನು ಹೇಳಲಾಗದು, ಈವರೆಗೆ ಇತಿಹಾಸ ನಿರ್ಮಿಸಿದ್ದೇನೆ ಎಂದರು.

ರಾಜ್ಯದಲ್ಲಿ ದಲಿತನಾಗಿ ಯಾರು ಮಾಡಲಾರದಂತ ಕೆಲಸ ಮಾಡಿದ್ದೇನೆ. ನೆರೆಯ ಚಿಕ್ಕೋಡಿ ಮೀಸಲು ಲೋಕಸಭೆ ಕ್ಷೇತ್ರದಿಂದ ಬೇರೆ ಬೇರೆ ಪಕ್ಷದಿಂದ ಮೂರು ಬಾರಿ ಗೆದ್ದಿರುವುದು ಇದು ಇತಿಹಾಸ ಅಲ್ಲವಾ. ಮುಂದಿನ ಯಾವುದೋ ಒಂದು ಸಂದರ್ಭದಲ್ಲಿ ರಾಜ್ಯದಲ್ಲಿ ಇತಿಹಾಸ ನಿರ್ಮಿಸಲಿದ್ದೇನೆ ಎಂದರು.

# ಸುಭದ್ರಾ ಕಮತಗಿ (ಗಿರಿಸಾಗರ) ನಿಧನ



**ಬನಹಟ್ಟಿ :** ಇಲ್ಲಿಯ ಸುಭದ್ರಾ ನೀಲಕಂಠಪ್ಪ ಕಮತಗಿ (ಗಿರಿಸಾಗರ) ತಮ್ಮ 70 ನೆಯ ವಯಸ್ಸಿನಲ್ಲಿ ಮಾರ್ಚ್ 12 ರಂದು ನಿಧನರಾಗಿದ್ದು, ಮೃತರು ತಮ್ಮ ಹಿಂದೆ ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ವೈದ್ಯರ ಕಿತ್ತಾಟ: ಶಾಸಕರ ದಿಢೀರ್ ಭೇಟಿ

## ರೋಗಿಗಳಿಲ್ಲದೇ ಬಿಕೋ ಎನ್ನುತ್ತಿರುವ ಸರ್ಕಾರಿ ಆಸ್ಪತ್ರೆ

**ಮಹಾಲಿಂಗಪುರ :** ಬಡರೋಗಿಗಳಿಗಾಗಿ ಇರುವ ಸ್ಥಳೀಯ ಸರ್ಕಾರಿ ಆಸ್ಪತ್ರೆಯಲ್ಲಿನ ಮುಖ್ಯವೈದ್ಯಾಧಿಕಾರಿ ಸಿ.ಎಂ.ವಜ್ಜರಮಟ್ಟಿ, ವೈದ್ಯರಾದ ಅಭಿನಂದನ ಡೋರ್ಲೆ, ಡಾ.ಸಂ–ಜಯಕುಮಾರ ತೇಲಿ ಅವರ ನಡುವಿನ ಕಿತ್ತಾಟದಿಂದಾಗಿ ಇಂದು 30 ಹಾಸಿಗೆಯ ಮಹಾಲಿಂಗಪುರ ಸರ್ಕಾರಿ ಆಸ್ಪತ್ರೆಯಲ್ಲಿ ಕೇವಲ 3 ರೋಗಿಗಳು ಮಾತ್ರ ಇದ್ದಾರೆ ಎಂದರೆ ಆಸತ್ರೆಯಲ್ಲಿನ ಅವ್ಯವಸ್ಥೆಯು ಯಾವ ಹಂತಕ್ಕೆ ತಲುಪಿದೆ ಎಂಬುದನ್ನು ನೀವೇ ಊಹಿಸಿರಿ!

**ಶಾಸಕರ ದಿಢೀರ ಭೇಟಿ :**
ಆಸ್ಪತ್ರೆಯಲ್ಲಿನ ವೈದ್ಯರ ಪ್ರತಿಷ್ಠೆಯ ಕಿತ್ತಾಟದಿಂದ ಬಡರೋಗಿಗಳಿಗೆ ತೊಂದರೆಯಾಗಿ, ಸಾರ್ವಜನಿಕ ದೂರುಬಂದ ಹಿನ್ನಲೆಯಲ್ಲಿ ಮಂಗಳವಾರ ಸಂಜೆ ಏಕಾಏಕಿ ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ಸಿದ್ದು ಸವದಿಯವರು ವೈದ್ಯರ ದಿನಚರಿ ಮತ್ತು ರೋಗಿಗಳ ತಪಾಸಣೆ, ಶಸ್ತ್ರಚಿಕಿತ್ಸೆಯ ಮಾಹಿತಿ ಪಡೆದುಕೊಂಡುವೈದ್ಯರನಡುವಿನಕಿತ್ತಾಟವನ್ನು ಇಲ್ಲಿಗೆ ನಿಲ್ಲಿಸಿ, ಸರ್ಕಾರಿ ಆಸ್ಪತ್ರೆಯ ವೈದ್ಯರನ್ನು ನಂಬಿ ಬರುವ ಬಡವರಿಗೆ ಸೇವೆ ಮಾಡರಿ. ವೈದ್ಯರು ಸರಿಯಾಗಿ ಕೆಲಸ ಮಾಡರಿ ಎಂದರು.




**ಮುಖ್ಯವೈದ್ಯರ ಮೇಲೆ ಆರೋಪಗಳ ಸರಮಾಲೆ:**
ಸ್ತ್ರೀರೋಗ ತಜ್ಞ ಡಾ.ಅಭಿನಂದ ಡೋರ್ಲೆ ಹಾಗೂ ವೈದ್ಯ ಸಂಜೀವಕುಮಾರ ತೇಲಿ ಅವರು ನಮ್ಮ ಕೆಲಸವನ್ನು ನಾವು ಸರಿಯಾಗಿ ಮಾಡುತ್ತಿದ್ದೇವೆ. ಮುಖ್ಯವೈದ್ಯರಾದ ಸಿ.ಎಂ. ವಜ್ಜರಮಟ್ಟಿಯವರು ಆಸ್ಪತ್ರೆಗೆ ರೋಗಿಗಳು ಬರುವ ಮುನ್ನವೇ ಕಾಲ ಮಾಡುವದು, ಖಾಸಗಿ ವ್ಯಕ್ತಿಗಳ ಕಡೆಯಿಂದ ಕಾಲ ಮಾಡಿಸಿ ತೊಂದರೆ ಕೊಡುವದು, ಆಶಾ ಕಾರ್ಯಕರ್ತೆಯರನ್ನು ಎತ್ತಿಕಟ್ಟಿ ಜಗಳ ಮಾಡಲು ಪ್ರೇರೇಪಿಸುತ್ತಿದ್ದಾರೆ. ಆಸ್ಪತ್ರೆಯ ಸಂಪೂರ್ಣ ಜವಾಬ್ದಾರಿ ಇರುವ ವೈದ್ಯರು ಯಾವುದೇ ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ. ಕೇವಲ ಒಬ್ಬ ವೈದ್ಯರಿಂದ ಆಸ್ಪತ್ರೆ ತುಂಬಲು ಸಾಧ್ಯವಿಲ್ಲ. ಎಲ್ಲಾ ವೈದ್ಯರು ಜವಾಬ್ದಾರಿಯಿಂದ ಕೆಲಸ ಮಾಡಿದಾಗ ಮಾತ್ರ ಆಸ್ಪತ್ರೆಗೆ ರೋಗಿಗಳು ಬರಲು ಸಾಧ್ಯ ಎಂದು ಶಾಸಕರ ಮುಂದೆ ತಮ್ಮ ಅಳಲನ್ನು ತೋಡಿಕೊಂಡರು.

**ಆಸ್ಪತ್ರೆಯಲ್ಲಿ ರಾಜಕೀಯ ಬೇಡ :**
ಮೂವರು ವೈದ್ಯರ ನಡುವಿನ ಭಿನ್ನಾಭಿಪ್ರಾಯ ಮತ್ತು ಆಂತರಿಕ ಕಿತ್ತಾಟ, ಹೊಂದಾಣಿಕೆಯ ಕೊರತೆಯನ್ನು ಕಣ್ಣಾರೆ ಕಂಡ ಶಾಸಕರು ಸರ್ಕಾರಿ ಆಸ್ಪತ್ರೆಯನ್ನು ನಂಬಿಕೊಂಡು ಬಡರೋಗಿಗಳು ಬರುತ್ತಾರೆ. ನಿಮ್ಮ ನಡುವಿನ ವೈಮನಸ್ಸು ಬಿಟ್ಟು ರೋಗಿಗಳಿಗೆ ಚಿಕಿತ್ಸೆ ನೀಡಿ. ಬಡವರಿಗಾಗಿ ಸರ್ಕಾರ ಲಕ್ಷಾಂತರ ಖರ್ಚು ಮಾಡುತ್ತಿದೆ. ನಾಲ್ವರು ವೈದ್ಯರು, 10 ನರ್ಸ, ಸಿಬ್ಬಂದಿ ಸೇರಿ 30 ಜನರು ಕೆಲಸ ಮಾಡುವ ಸರ್ಕಾರಿ ಆಸ್ಪತ್ರೆಯಲ್ಲಿ ಕೇವಲ 3 ರೋಗಿಗಳು ಮಾತ್ರ ಇದ್ದಾರೆ ಎಂದರೆ ಏನು ಅರ್ಥ? ರಾಜಕೀಯ ಮಾಡುವದಿದ್ದರೆ ನೌಕರಿಗೆ ರಾಜೀನಾಮೆ ನೀಡಿ ರಾಜಕೀಯ ಮಾಡರಿ. ಆದರೆ ಬಡವರ ಸರ್ಕಾರಿ ಆಸ್ಪತ್ರೆಯಲ್ಲಿ ರಾಜ–ಕೀಯ ಮಾಡಿ ಬಡರೋಗಿಗಳಿಗೆ ಅನ್ಯಾಯ ಮಾಡಬೇಡಿ. ಸರಿಯಾಗಿ ಕರ್ತವ್ಯ ನಿರ್ವಹಿಸಿ, ಆಸ್ಪತ್ರೆಗೆ ರೋಗಿಗಳು ಬರುವಂತೆ ಕೆಲಸ ಮಾಡರಿ,ಇಲ್ಲವೇವರ್ಗಾವಣೆಪಡೆದುಕೊಂಡು ಬೇರೆಕಡೆ ಹೋಗಿ ಎಂದು ವೈದ್ಯರನ್ನು ತರಾಟೆಗೆ ತೆಗೆದುಕೊಂಡರು. ವೈದ್ಯರೊಂದಿಗೆ ಅಸಭ್ಯವಾಗಿ ವರ್ತಿಸುವ ಮತ್ತು ಸರ್ಕಾರಿ ಆಸ್ಪತ್ರೆಗೆ ರೋಗಿಗಳನ್ನು ಕರೆದುಕೊಂಡು ಬರದ ಆಶಾ ಕಾರ್ಯಕರ್ತೆಯರ ಹೆಸರು ಕೊಡಿ ಎಂದರು.

> **"ಆಸ್ಪತ್ರೆಯ ಮುಖ್ಯವೈದ್ಯಾಧಿಕಾರಿ ಡಾ.ಸಿ.ಎಂ.ವಜ್ಜರಮಟ್ಟಿಯವರು ಮಕ್ಕಳ ತಜ್ಞರು, ಆಸ್ಪತ್ರೆಯಲ್ಲಿ ಒಂದು ಮಗು ಚಿಕಿತ್ಸೆಗೆ ದಾಖಲಾಗಿಲ್ಲ. ಜೊತೆಗೆ ರಾಜಕೀಯ ವ್ಯಕ್ತಿಗಳ ಪ್ರಭಾವಕ್ಕೆ ಒಳಗಾಗಿ, ಇತರ ವೈದ್ಯರುಗಳ ಜೊತೆಗೆ ಹೊಂದಾಣಿಕೆಯ ಕೊರತೆಯಿಂದಾಗಿಯೇ ಇಂದು ಆಸ್ಪತ್ರೆಯ ಸ್ಥಿತಿಯು ಈ ಹಂತಕ್ಕೆ ತಲುಪಿದೆ. ಜಿಲ್ಲಾ ವೈದ್ಯಾಧಿಕಾ–ರಿಗಳು ಆಸ್ಪತ್ರೆಗೆ ಭೇಟಿ ನೀಡಿ, ಇಲ್ಲಿನ ಸ್ಥಿತಿಗತಿಯನ್ನು ಅರಿತು ಮುಖ್ಯವೈದ್ಯಾಧಿಕಾರಿಗಳ ಬದಲಾವಣೆ ಮಾಡಬೇಕು ಎಂದು ಹೆಸರು ಹೇಳಲಿಚ್ಛಿಸದ ಕಾಂಗ್ರೆಸ್ ಮತ್ತು ಬಿಜೆಪಿ ಮುಖಂಡರಿಬ್ಬರು ಒತ್ತಾಯಿಸಿದ್ದಾರೆ.**

**ಲಕ್ಷಾಂತರ ಸಂಬಳ ವ್ಯರ್ಥ :**
ಮುಖ್ಯವೈದ್ಯಾಧಿಕಾರಿ ಸಿ.ಎಂ.ವಜ್ಜರಮಟ್ಟಿ ಅವರಿಗೆ 1.53 ಲಕ್ಷ, ಡಾ.ಸಂಜೀವಕುಮಾರ ತೇಲಿ ಅವರಿಗೆ 1.24ಲಕ್ಷ, ಡಾ.ಅಭಿನಂದನ ಡೋರ್ಲೆ ಅವರಿಗೆ 1.17ಲಕ್ಷ ಸಂಬಳವಿದೆ. ನರ್ಸ ಮತ್ತು ಸಿಬ್ಬಂದಿ ಸೇರಿ 30 ನೌಕರರ ಸಂಬಳ, ಔಷಧಾಲಯದ ಖರ್ಚು ಸೇರಿ ತಿಂಗಳಿಗೆ ಕನಿಷ್ಠ 10 ಲಕ್ಷ ರೂಗಳನ್ನು ಸರ್ಕಾರ ಮಹಾಲಿಂಗಪುರ ಸರ್ಕಾರಿ ಆಸ್ಪತ್ರೆಗೆ ಖರ್ಚು ಮಾಡುತ್ತಿದ್ದರು ಸಹ, ವೈದ್ಯರ ನಡುವಿನ ಕಿತ್ತಾಟ, ಹೊಂದಾಣಿಕೆ ಕೊರತೆ, ರಾಜಕೀಯ ವ್ಯಕ್ತಿಗಳ ಪ್ರಭಾವದಿಂದಾಗಿ ಆಸ್ಪತ್ರೆಗೆ ಬರುವ ವೈದ್ಯರಿಗೆ ಮಾತ್ರ ಉತ್ತಮವಾದ ಚಿಕಿತ್ಸೆ ಸಿಗುತ್ತಿಲ್ಲ ಹಾಗೂ ರೋಗಿಗಳು ಸಂಖ್ಯೆಯು ಇಳಿಮುಖವಾಗುತ್ತಿದೆ ಎನ್ನುವದು ವಿಷಾದನೀಯ ಸಂಗತಿಯಾಗಿದೆ.

# ಶಾಸಕರಿಂದ 69.43 ಲಕ್ಷ ಮೊತ್ತದ ಕಾಮಗಾರಿಗೆ ಚಾಲನೆ

**ಜಮಖಂಡಿ :** ತಾಲೂಕಿನ ಸಾವಳಗಿ ಗ್ರಾಮದಲ್ಲಿ ಕೃಷಿ ಉತ್ಪನ್ನ ಉಪಮಾರುಕಟ್ಟೆ ಸಾವಳಗಿ ಪ್ರಾಂಗಣದ ಕಂಪೌಂಡ ಗೋಡೆ ನಿರ್ಮಾಣ ಕಾಮಗಾ–ರಿಗೆ ಶಾಸಕ ಜಗದೀಶ ಗುಡಗುಂಟಿ ಭೂಮಿಪೂಜೆ ನೆರವೆರಿಸಿದರು.



ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಜಮಖಂಡಿ 2023–24ನೇ ಸಾಲಿನ ಆರ್.ಐ.ಡಿ.ಎಫ್–29ರ ಯೋಜನೆ ಅಡಿಯಲ್ಲಿ ಸಾವಳಗಿ ಎಪಿಎಂಸಿಪ್ರಾಂಗಣದಕಾಮಗಾ–ರಿಗೆಅಂದಾಜು69.43ಲಕ್ಷಮೊತ್ತದ ಕಂಪೌಂಡ ಗೋಡೆ ನಿರ್ಮಾಣ–ಕ್ಕೆ ಚಾಲನೆ ನೀಡಲಾಗಿದ್ದು, ಕಾಮಗಾರಿ ಮೂರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದರು.

ಇದೇ ಸಂದರ್ಭದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸಹಾಯಕ ಕಾರ್ಯದರ್ಶಿ ಅಬಿದಾಬೇಗಂ ಮುಲ್ಲಾ, ವಿಜಯಪುರದ ಮಾರುಕಟ್ಟೆ ಅಭಿವೃದ್ಧಿ ಯೋಜನೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ನಾಗೇಂದ್ರಪ್ಪ, ಕಿರಿಯ ಅಭಿಯಂತರ ಬಾಪುಗೌಡ ಪಾಟೀಲ, ಬಿಜೆಪಿ ನಗರಮಂಡಳ ಅಧ್ಯಕ್ಷ ಅಜಯ ಕಡಪಟ್ಟಿ, ನರೆಂದ್ರ ಮಾನೆ, ಗುತ್ತಿಗೆದಾರ ಮಲ್ಲಪ್ಪ ಮಲ್ಲನ್ನವರ, ಗ್ರಾಮ ಪಂಚಾಯತ ಅಧ್ಯಕ್ಷ, ಸದಸ್ಯರು ಗ್ರಾಮದ ಗುರು ಹಿರಿಯರು ಇದ್ದರು.

**ಮಾತಿನ ಚಕಮಕಿ.....**
ಮಂಗಳವಾರ 10 ಘಂಟೆಗೆ ಜರುಗಬೇಕಿದ್ದ ಭೂಮಿಪೂಜೆ 12.30ರ ಉರಿಬಿಸಿಲಿನಲ್ಲಿ ನೆರವೇರಿತು. ಅಧಿಕಾ–ರಿಗಳು ಸಾರ್ವಜನಿಕರು ಕಾದು ಕೆಂಡವಾಗಿದ್ದರು. ಕೆಲವು ರಾಜ–ಕೀಯ ವಿಚಾರವಾಗಿ ಪ್ರಮುಖರು ಮತ್ತು ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು.

## ಕಾಲ್ನಡಿಗೆಯಲ್ಲಿ ತೀರ್ಥಯಾತ್ರೆಗೈದ ಸದ್ಭಕ್ತನ ಸನ್ಮಾನ



**ಜಮಖಂಡಿ :** ಎರಡೂ ತಿಂಗಳುಗಳ ಕಾಲ ಕಾಲ್ನಡಿಗೆಯಲ್ಲಿ ತೀರ್ಥಯಾತ್ರೆ ಕೈಗೊಂಡು ಅಯೋಧ್ಯೆ ಮತ್ತು ಹನ್ನೆರಡು ಜ್ಯೋತಿರ್ಲಿಂಗಗಳ ದರ್ಶನ ಪಡೆದಿರುವ ತಾಲ್ಲೂಕಿನ ಹುಲ್ಯಾಳ ಗ್ರಾಮದ ಸದ್ಭಕ್ತ ಪೂರ್ಣಾನಂದ ಗೋಠೆ ಸುರಕ್ಷಿತವಾಗಿ ಗ್ರಾಮಕ್ಕೆ ಮರಳಿದ್ದಾರೆ.

ಗ್ರಾಮದ ಹಿರಿಯರ ಸಮ್ಮುಖದಲ್ಲಿ ಹುಲ್ಯಾಳ ಗ್ರಾಮದ ಗುರುದೇವಾಶ್ರಮದ ಪರವಾಗಿ ಹರ್ಷಾನಂದ ಮಹಾಸ್ವಾಮಿಗಳು ಪೂರ್ಣಾನಂದ ಅವರನ್ನು ಸೋಮವಾರ ಸನ್ಮಾನಿಸಿ ಸದ್ಭಕ್ತನ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಗ್ರಾಮ ಪಂಚಾಯ್ತಿ ಸದಸ್ಯ ಉಮೇಶ ಕೋರಿ, ಗ್ರಾಮ ಪಂಚಾಯ್ತಿ ಸದಸ್ಯ ಚನ್ನಪ್ಪ ಗಣಿ, ಗ್ರಾಮ ಪ್ರಮುಖರಾದ ಪಿ.ಜಿ. ಕೋರಿ, ಅರುಣ ಶಿವಸಿಂಪಿ, ಗಣಪತಿ ಗಲಗಲಿ, ನಿವೃತ್ತ ಶಿಕ್ಷಕ ಗುರುನಾಥ ಸುತಾರ, ಭೀಮಾಜಿ ಕುಂಟೆ, ಈರಯ್ಯಾ ಹಿರೇಮಠ, ಸಿದ್ರಾಯ ಅಳ್ಳಿಮಟ್ಟಿ, ಶಂಭು ಮಂಟೂರ, ಹೊಳಬಸಯ್ಯ ಆಲಬಾಳ, ಸುರೇಶ ದೊಡವಾಡ ಇದ್ದರು.

# ಸಮುದಾಯ ಭವನಗಳಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಶಂಕುಸ್ಥಾಪನೆ

## ಸ್ವಾರ್ಥರಹಿತ ರಾಜಕಾರಣ ಮುಖ್ಯ: ಲಕ್ಷ್ಮೀ ಹೆಬ್ಬಾಳಕರ್

**ಬೆಳಗಾವಿ :** ಜನರ ಪ್ರೀತಿ, ವಿಶ್ವಾಸ ನನಗೆ ಮುಖ್ಯ. ನಾನು ಎಂದೂ ದ್ವೇಷ ರಾಜಕೀಯ ಮಾಡುವುದಿಲ್ಲ. ನನಗೆ ರಾಜಕೀಯ ಪುನರ್ಜನ್ಮ ನೀಡಿದ ಬೆಳಗಾವಿ ಗ್ರಾಮೀಣ ಕ್ಷೇತ್ರದ ಜನರ ಋಣ ತೀರಿಸಲು ಸಾಧ್ಯವಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ. ಸತತ ಎರಡು ಚುನಾವಣೆಯಲ್ಲಿ ಸೋತರೂ ನನಗೆ ಧೈರ್ಯ ತುಂಬಿದ ಕ್ಷೇತ್ರದ ಜನರಿಗೆ ನಾನು ಜೀವನ ಪರ್ಯಂತ ಋಣಿಯಾಗಿರುವೆ ಎಂದರು.



ಬೆಳಗಾವಿ ಗ್ರಾಮೀಣ ಕ್ಷೇತ್ರದ ಮಾರಿಹಾಳ ಗ್ರಾಮದಲ್ಲಿ ಗುರುವಾರ ಸಂಜೆ ಮುತಗಾ, ಮೊದಗಾ, ತುಮ್ಮರಗುದ್ದಿ, ಕರಡಿಗುದ್ದಿ ಹಾಗೂ ಮಾರಿಹಾಳ ಈ ಎಲ್ಲ ಗ್ರಾಮಗಳಲ್ಲಿ ಸಮುದಾಯ ಭವನ ನಿರ್ಮಾಣದ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು.

**ರಾಮ ರಾಜ್ಯದ ಪರಿಕಲ್ಪನೆಯ ಸರ್ಕಾರ :**
ನಾನು ಅಪ್ಪಟ ರಾಮಭಕ್ತಳು. ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಕೂಡ ರಾಮ ರಾಜ್ಯ ಪರಿಕಲ್ಪನೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ನಮ್ಮ ಸರ್ಕಾರ ಪ್ರತಿ ತಿಂಗಳು ಜನರ ಗ್ಯಾರಂಟಿ ಯೋಜನೆಗಳಿಗಾಗಿ 5 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಇದು ನಿಜವಾದ ರಾಮ ರಾಜ್ಯದ ಪರಿಕಲ್ಪನೆ ಎಂದು ಹೇಳಿದರು. ಗ್ಯಾರಂಟಿ ಯೋಜನೆಗಳಿಂದ ಜನರು ಖುಷಿಯಾಗಿದ್ದಾರೆ. ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ನಮ್ಮ ಮಹಿಳೆಯರಿಗೆ ಗೃಹಲಕ್ಷ್ಮೀ ಯೋಜನೆಯ ಮೂಲಕ ಪ್ರತಿ ತಿಂಗಳು ಎರಡು ಸಾವಿರ ರೂಪಾಯಿ ಹಣ ತಲುಪುತ್ತಿದೆ ಎಂದು ಸಚಿವರು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಸತೀಶ್ ಜಾರಕಿಹೊಳಿ ಅವರ ಆಶೀರ್ವಾದ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ಇಂದು ಕ್ಷೇತ್ರದ ಮನೆಮಗಳಾಗಿ ಕಾರ್ಯನಿರ್ವಹಿಸುತ್ತಿರುವೆ. ಬೆಳಗಾವಿ ಗ್ರಾಮೀಣ ಕ್ಷೇತ್ರ ಸಿಕ್ಕಿದ್ದು, ನನ್ನ ಪೂರ್ವ ಜನ್ಮದ ಪುಣ್ಯ ಎಂದು ಸಚಿವರು ಹೇಳಿದರು. ಧರ್ಮರಾಯನ ಧರ್ಮ, ಅರ್ಜುನನ ಗುರಿ, ಕೃಷ್ಣನ ಚತುರತೆ, ವಿಧುರನ ಬುದ್ಧಿ, ಭೀಮನ ಬಲ, ರಾಮನ ಉದಾರತೆ, ಶಿವಾಜೀ ಮಹರಾಜರ ಧೈರ್ಯ.ಈ ಗುಣಗಳು ಇದ್ದಾಗ ಮಾತ್ರ ಒಳ್ಳೆಯ ನಾಯಕರಾಗಲು ಸಾಧ್ಯ. ನಾಯಕತ್ವಗುಣದ ಜೊತೆಗೆ ವಿನಮ್ರತೆಯೂ ಇರಬೇಕು.

ಆ ವಿನಮ್ರತೆ ಇದ್ದಾಗಷ್ಟೆ ರಾಜಕೀಯ ನಾಯಕರಿಗೆ ಸಾರ್ಥಕತೆ ಇರುತ್ತದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು. ನಾನೆಂದು ಜಾತಿ ರಾಜಕೀಯ ಮಾಡುವುದಿಲ್ಲ. ನಾನು ಹುಟ್ಟಿದ್ದು ಲಿಂಗಾಯತ ಸಮಾಜವಾದರೂ ನನಗೆ ಪುನರ್ಜನ್ಮ ಕೊಟ್ಟಿದ್ದು ಕ್ಷೇತ್ರದ ಮತದಾರರು. ಸ್ವಾರ್ಥ ರಹಿತ ರಾಜಕೀಯ ಮಾಡುವುದೇ ನನ್ನ ಗುರಿ ಎಂದರು.

ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ, ತಾಲೂಕು ಪಂಚಾಯತಿ ಮಾಜಿ ಅಧ್ಯಕ್ಷರಾದ ಶಂಕರಗೌಡ ಪಾಟೀಲ, ಗ್ರಾಮ ಪಂಚಾಯತ್ ಅಧ್ಯಕ್ಷೆ ಗಿರಿಜಾ ಪಾಟೀಲ, ಉಪಾಧ್ಯಕ್ಷ ಆಸೀಫ್ ಮುಲ್ಲಾ, ರಾಮಚಂದ್ರ ಚವ್ಹಾಣ, ಮಹಮ್ಮದ್ ಗೌಸ ಭಾಗವಾನ್, ಕಲ್ಲಪ್ಪ ಸೀತಿಮನಿ, ನಾರಾಯಣ ಸೊಗಲಿ, ಸಂಜಯ್ ಚಾಟೆ, ಬಸವರಾಜ ಮ್ಯಾಗೋಟಿ, ಪಿಡಿಓ ರಾಣಿ ಪೂಜಾರ, ಲಕ್ಷ್ಮೀನಾರಾಯಣ ಕಲ್ಲೂರ್, ನಿರ್ಮಿತ್ರ ಕೇಂದ್ರ ಪ್ರೊಜೆಕ್ಟ್ ಡೈರೆಕ್ಟರ್ ಶೇಖರಗೌಡ ಕುರಡಗಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಆರೋಗ್ಯವಂತರಾಗಿ ಬೆಳೆಯಲು ಉತ್ತಮ ಸಂಸ್ಕಾರ ಅಗತ್ಯ



**ಜಮಖಂಡಿ :** ಮಕ್ಕಳು ಆರೋಗ್ಯವಂತ ನಾಗರಿಕರಾಗಿ ಬೆಳೆಯಬೇಕಾದರೆ ಮಕ್ಕಳಿಗೆ ಉತ್ತಮಸಂಸ್ಕಾರ ಮನೆಯಿಂದ ಆರಂಭವಾಗಬೇಕು. ಕುಟುಂಬ ಸುಧಾರಿಸಿದರೆ ಸಮಾಜ ಸುಧಾರಿಸಲಿದೆ ಎಂದು ಹೃದಯರೋಗ ತಜ್ಞ ನಾಡೋಜ ಡಾ.ಎಚ್.ಜಿ.ದಡ್ಡಿ ಹೇಳಿದರು.

ತಾಲೂಕಿನ ಹುನ್ನೂರ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕ ಘಟಕ ಹಮ್ಮಿಕೊಂಡಿದ್ದ ದಡ್ಡಿ–ನ್ಯಾಮಗೌಡ ಕುಟುಂಬ ಹಾಗೂ ಪ್ರೊ.ಪಿ.ವಿ. ವಜ್ರಮಟ್ಟಿ ಮೇಘಮಿತ್ರ ಸ್ಮರಣಾರ್ಥ ಸಾಂಸ್ಕೃತಿಕ ಸವಾಲುಗಳು ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಿಂದೆ ಅವಿಭಕ್ತ ಕುಟುಂಬಗಳು ಇರುತ್ತಿದ್ದವು. ಹಾಗಾಗಿ ಮನೆಯ ಹಿರಿಯರಿಂದ ಮಕ್ಕಳಿಗೆ ಸರಿಯಾದ ಸಂಸ್ಕಾರ ದೊರೆಯುತ್ತಿತ್ತು. ಹಿರಿಯರ ಮಾರ್ಗದರ್ಶನದಲ್ಲಿ ಮಕ್ಕಳು ಒಳ್ಳೆಯ ನಾಗ–ರಿಕರಾಗಿ ರೂಪುಗೊಳ್ಳುತ್ತಿದ್ದರು. ಆದರೆ, ಇಂದು ಮನಷ್ಯ ಬಹಳ ಸ್ವಾರ್ಥಿಯಾಗುತ್ತಿದ್ದಾನೆ. ಜೀವಕ್ಕೆ ಮತ್ತು ಜೀವನಕ್ಕೆ ಬೆಲೆ ಕೊಡುವುದನ್ನು ಮರೆತಿ–ದ್ದಾನೆ ಎಂದರು.

ಸಾಹಿತಿ ರುದ್ರಗೌಡ ಪಾಟೀಲ ಮಾತನಾಡಿ, ಪ್ರೊ.ಪಿ.ವಿ.ವಜ್ರಮಟ್ಟಿಅವರಬದುಕು–ಬರಹ ಜೊತೆಗೆ ಕನ್ನಡ–ಹಿಂದಿ ದ್ವಿಭಾಷಾ ಸಾಹಿತಿಗಳಾಗಿದ್ದರು. ಸಮಾಜದಲ್ಲಿರುವ ಮೂಢನಂಬಿಕೆ, ಸಂಪ್ರದಾಯ, ಕಂದಾಚಾರಗಳು ಮತ್ತು ವರ್ಗ–ವರ್ಣಭೇದಗಳ ವಿರುದ್ಧ ಅವರು ಸದಾ ಹೋರಾಡುತ್ತಿದ್ದರು ಎಂದರು. ಸಾಹಿತಿ ಬಸವರಾಜ ಕಡ್ಡಿ ಮಾತನಾಡಿದರು. ಪ್ರಾಚಾರ್ಯ ಡಾ.ಕೆ.ಡಿ. ಗೋಳಸಂಗಿ ಉದ್ಘಾಟಿಸಿದರು. ಕಸಾಪ ತಾಲೂಕ ಘಟಕದ ಅಧ್ಯಕ್ಷ ಸಂತೋಷ ತಳಕೇರಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ನಿವೃತ್ತ ಪ್ರಾಚಾರ್ಯ ಡಾ.ಸಂಗಮೇಶ ಮಟೋಳಿ, ಕಸಾಪ ಗೌರವ ಕಾರ್ಯದರ್ಶಿ ವಿನೋದ ಲೋಣಿ, ನಿವೃತ್ತ ಪ್ರಾಚಾರ್ಯ ಸಿ.ಎಸ್. ಝಳಕಿ, ದತ್ತಿದಾನಿ ಅರುಣ ವಜ್ರಮಟ್ಟಿ ಇದ್ದರು. ಇದೇ ಸಂದರ್ಭದಲ್ಲಿ ಸಾಹಿತಿ ಡಾ.ಶ್ರೀದೇವಿ ಸುವರ್ಣಖಂಡಿ ಮತ್ತು ಅಂಕಣಕಾರ ಬಸವರಾಜ ಗಿರಗಾಂವಿ ಅವರಿಗೆ ಮೇಘಮಿತ್ರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಉಪನ್ಯಾಸಕ ಅರವಿಂದ ಕಡಕೋಳ ಪ್ರಾರ್ಥಿಸಿದರು. ಡಾ.ಎನ್.ವಿ.ಅಸ್ಕಿ ಸ್ವಾಗತಿಸಿದರು. ಶಿಕ್ಷಕ ಎನ್.ಬಿ.ಮಾಲಗಾರ ನಿರೂಪಿಸಿದರು. ಪ್ರಾಚಾರ್ಯ ಡಾ. ಟಿ.ಪಿ. ಗಿರಡ್ಡಿ ವಂದಿಸಿದರು.

## ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಆಡಳಿತ ಮಂಡಳಿಯ ಚುನಾವಣೆಗೆ ಅವಿರೋಧ ಆಯ್ಕೆ

**ಬೆಳಗಾವಿ:** ಬರುವ ದಿನಾಂಕ 17 ರಂದು ಜರುಗುವ ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ಬೆಳಗಾವಿ ಇದರ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಅರಭಾವಿ ಶಾಸಕ ಮತ್ತು ಕೆಎಂಎಫ್ ನಿಕಟಪೂರ್ವ ಅಧ್ಯಕ್ಷ, ನಿರ್ದೇಶಕ ಬಾಲಚಂದ್ರ ಜಾರಕಿಹೊಳಿ ಅವರ ನೇತೃತ್ವದ 13 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಿವೇಕರಾವ್ ಪಾಟೀಲ (ರಾಯಬಾಗ), ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಗೋಕಾಕ್), ಮಲ್ಲಪ್ಪ ಬಾಳಪ್ಪ ಪಾಟೀಲ (ಮೂಡಲಗಿ), ಕಲ್ಲಪ್ಪ ನಿಂಗಪ್ಪ ಗಿರೆನ್ನವರ (ಬೆಳಗಾವಿ), ಡಾ. ಬಸವರಾಜ ಮ. ಪರವಣ್ಣನವರ (ಕಿತ್ತೂರು),ಬಾಬುರಾವ ಸತ್ತೆಪ್ಪ ವಾಘಮೋಡೆ(ಕಾಗವಾಡ), ವಿರೂಪಾಕ್ಷಿ ಬಾಳಪ್ಪ ಈಟಿ (ಚಿಕ್ಕೋಡಿ), ರಾಯಪ್ಪ ಬಾಳಪ್ಪ ಡೂಗ (ಹುಕ್ಕೇರಿ), ಪ್ರಕಾಶ ಯಲ್ಲಪ್ಪ ಅಂಬೋಜಿ (ಖಾನಾಪುರ), ಸಂಜಯ ಶ್ರೀಶೈಲಪ್ಪ ಶಿಂತ್ರೆ (ನಿಪ್ಪಾಣಿ), ಸದೆಪ್ಪ ಬಸಲಿಂಗಪ್ಪ ವಾರಿ (ಸವದತ್ತಿ), ಶಂಕರ ಕೆಂಚಪ್ಪ ಇಟ್ನಾಳ (ಯರಗಟ್ಟಿ), ಸವಿತಾ ಸುರೇಶ ಖಾನಪ್ಪಗೋಳ (ಮೂಡಲಗಿ–ಮಹಿಳಾ) ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿದ್ದ ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವ ವಿದ್ಯಾಲಯದ ರಿಜಿಸ್ಟ್ರಾರ್ ರಾಜಶ್ರೀ ಜೈನಾಪುರ ಪ್ರಕಟಿಸಿದರು. ಇನ್ನು ಅಥಣಿ, ಬೈಲಹೊಂಗಲ ಮತ್ತು ರಾಮದುರ್ಗ ಕ್ಷೇತ್ರಗಳಿಗೆ ತಲಾ ಒಂದೊಂದು ಸ್ಥಾನಗಳಿಗೆ ಬರುವ ಭಾನುವಾರ 17 ರಂದು ಚುನಾವಣೆ ನಡೆಯಲಿದೆ ಎಂದು ಜೈನಾಪುರ ತಿಳಿಸಿದರು. ನಾಮಪತ್ರಗಳನ್ನು ವಾಪಸ್ಸು ಪಡೆಯಲು ಇಂದು ಸೋಮವಾರದಂದು ಕಡೆಯ ದಿನವಾಗಿತ್ತು. ನೂತನವಾಗಿ ಅವಿರೋಧವಾಗಿ ಆಯ್ಕೆಯಾದ ನಿರ್ದೇಶಕ ಮಂಡಳಿಯವರನ್ನು ಇದೇ ಸಂದರ್ಭದಲ್ಲಿ ಅವರು ಅಭಿನಂದಿಸಿದರು. ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘದ ಅಭಿವೃದ್ಧಿಗೆ ಕ್ರಮ– ಬಾಲಚಂದ್ರ ಜಾರಕಿಹೊಳಿ ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಭಿವೃದ್ಧಿಗೆ ಸಹಕಾರಿ ತತ್ವದಡಿ ಶ್ರಮಿಸುವುದಾಗಿ ಆಡಳಿತ ಮಂಡಳಿಯ ಚುನಾವಣೆಯ ನೇತೃತ್ವ ವಹಿಸಿರುವ ಶಾಸಕ ಮತ್ತು ಕೆಎಂಎಫ್ ನಿರ್ದೇಶಕ ಬಾಲಚಂದ್ರ ಜಾರಕಿಹೊಳಿ ಅವರು ತಿಳಿಸಿದರು. ಇದೇ ದಿ.17 ರಂದು ಜಿಲ್ಲಾ ಹಾಲು ಒಕ್ಕೂಟಕ್ಕೆ ಚುನಾವಣೆ ನಿಗದಿಯಾಗಿದ್ದು, ರೈತರು ಮತ್ತು ಸಹಕಾರಿಗಳ ಸಹಕಾರದಿಂದ ಒಟ್ಟು 16 ಸ್ಥಾನಗಳ ಪೈಕಿ 13 ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ನಡೆದಿದೆ. ಕಳೆದ ಮೂರು ಅವಧಿಗಳಿಂದ ಈ ಒಕ್ಕೂಟದ ಆಡಳಿತ ಮಂಡಳಿಯ ಸದಸ್ಯರ ಸಹಕಾರದೊಂದಿಗೆ ಅವಿರೋಧವಾಗಿ ಆಯ್ಕೆ ನಡೆದಿದೆ. ಈ ಬಾರಿಯೂ ಎಲ್ಲ ಸ್ಥಾನಗಳಿಗೆ ಅವಿರೋಧ ಆಯ್ಕೆಗೆ ಪ್ರಯತ್ನಿಸಲಾಗುತ್ತಿದೆಯಾದರೂ ಕೆಲವರಲ್ಲಿ ಹೊಂದಾಣಿಕೆ ಕೊರತೆಯಿಂದ ಮೂರು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಈ ಮೂರೂ ಸ್ಥಾನಗಳು ಸಹ ತಮ್ಮ ನೇತೃತ್ವದ ಅಭ್ಯರ್ಥಿಗಳು ಆಯ್ಕೆಯಾಗಲಿದ್ದಾರೆ. ಸಹಕಾರ ತತ್ವಗಳನ್ನು ಪಾಲನೆ ಮಾಡಿಕೊಂಡು ಹಾಲು ಒಕ್ಕೂಟದ ಪ್ರಗತಿಗೆ ಶ್ರಮಿಸುತ್ತಿರುವ ರೈತರ ಸಂಸ್ಥೆಗೆ ಪಕ್ಷಾತೀತ ಮತ್ತು ಜಾತ್ಯತೀತವಾಗಿ ಚುನಾವಣೆಯನ್ನು ನಡೆಸಲಾಗಿದೆ. ಇದರಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಮುಖಂಡರು ಸಹ ಸಹಕಾರ ನೀಡಿದ್ದಾರೆ. ಅದರಲ್ಲಿಯೂ ರಾಜ್ಯ ಸರ್ಕಾರದ ಸಚಿವರುಗಳ ಸಹ ನಮಗೆ ಅಗತ್ಯವಿರುವ ಎಲ್ಲ ಬೆಂಬಲವನ್ನು ನೀಡುವ ಮೂಲಕ ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ್ದಾರೆ. ಅವರಿಗೂ, ವಿವಿಧ ಪಕ್ಷಗಳ ಮುಖಂಡರಿಗೂ ಬಾಲಚಂದ್ರ ಜಾರಕಿಹೊಳಿ ಅವರು ಕೃತಜ್ಞತೆಯನ್ನು ಸಲ್ಲಿಸಿದರು. ಮುಂದಿನ ಐದು ವರ್ಷಗಳ ಅವಧಿಯಲ್ಲಿ ಬೆಳಗಾವಿ ಜಿಲ್ಲಾ ಹಾಲು ಒಕ್ಕೂಟವನ್ನು ರಾಜ್ಯದಲ್ಲಿಯೇ ಮಾದರಿಯನ್ನಾಗಿ ಮಾಡಲಾಗುವುದು. ರೈತರು, ಹಾಲು ಉತ್ಪಾದಕರು ಮತ್ತು ನೌಕರರ ಆಶಯದಂತೆ ಒಕ್ಕೂಟದ ಬಲವರ್ಧನೆಗೆ ಸಹಕಾರ ತತ್ವದಡಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯ ನಿರ್ವಹಿಸುವುದಾಗಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಹೇಳಿದರು.

## ಶಿವಣ್ಣನ ನೋಡಿ ಅಭಿಮಾನಿಗಳ ಪುಳಕ

**ಬೆಳಗಾವಿ :** 'ಕರಟಕ ದಮನಕ' ಚಲನಚಿತ್ರದ ಪ್ರಚಾರ–ಕ್ಕೆ ಇಲ್ಲಿನ ಪ್ರಕಾಶ್ ಚಿತ್ರಮಂದಿರಕ್ಕೆ ಮಂಗಳವಾರ ಆಗಮಿಸಿದ ನಟ ಶಿವರಾಜ್‌ಕುಮಾರ್ ಅವರನ್ನು ಅಭಿಮಾನಿಗಳು ಸಂಭ್ರಮದಿಂದ ಸ್ವಾಗತಿಸಿದರು. ವಾಹನ ಇಳಿದು ಥೇಟರ್‌ನತ್ತ ಹೆಜ್ಜೆ ಹಾಕಿದ ನಟನಿಗೆ ಪುಷ್ಪವೃಷ್ಟಿ ಮಾಡಿ, ಜೈಕಾರ ಹಾಕಿದರು.

ಸುತ್ತ ಸೇರಿದ ಅಭಿಮಾನಿಗಳು ನೆಚ್ಚಿನ ನಟನ ಜತೆಗೆ ಫೋಟೊ, ಸೆಲ್ಫಿ ತೆಗೆದುಕೊಳ್ಳಲು ಮುಗಿಬಿದ್ದರು. ನಂತರ ಶಿವರಾಜ್‌ಕುಮಾರ್ ಅಭಿಮಾನಿಗಳನ್ನ ಉದ್ದೇಶಿಸಿ ಮಾತನಾಡಿದರು.

'ಬೆಳಗಾವಿ ಎಂದರೆ ಕುಂದಾ ನೆನಪಾಗುತ್ತದೆ. ಇಲ್ಲಿನ ಕುಂದಾದ ಸಿಹಿ ನಮ್ಮನ್ನು ಯಾವಾಗಲೂ ಸೆಳೆಯುತ್ತದೆ. ನಮ್ಮ ತಂದೆಯವರಿಗೂ ಕುಂದಾ ಬಲು ಇಷ್ಟದ ತಿನಿಸಾಗಿತ್ತು. ಇಲ್ಲಿನ ಅಭಿಮಾನಿಗಳ ಹೃದಯವಂತಿಗೆ ಕುಂದಾದಷ್ಟೇ ಸಿಹಿ' ಎಂದರು.

'ಕರಟಕ ದಮನಕ ಚಿತ್ರದಲ್ಲಿ ಹಾಸ್ಯವೇ ಪ್ರಧಾನವಾಗಿದೆ. ಒಂದು ಸಾಮಾಜಿಕ ಸಂದೇಶವಿದೆ. ನೀರು, ಊರು, ಊರಿನ ತೇರು ಎಷ್ಟು ಮುಖ್ಯ ಎಂಬುದನ್ನು ತಿಳಿಸಲಾಗಿದೆ. ಎಲ್ಲರೂ ಸಿನಿಮಾ ನೋಡಿ ಪ್ರೋತ್ಸಾಹಿಸಿ' ಎಂದರು.

ಚಿತ್ರದ ನಿರ್ದೇಶಕ ಯೋಗರಾಜ ಭಟ್ ಕೂಡ ಜತೆಗಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State